ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2015

॥ ಧಿಯೋ ಯೋನಃ ಪ್ರಚೋದಯಾತ್ ॥

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-9 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಮಂಟಪದಲ್ಲಿ ಋಗುಪಾಕರ್ಮ ಆಚರಣೆ

ಬ್ರಾಹ್ಮಣರಲ್ಲಿ ನಾಲ್ಕು ವೇದಗಳ ಹೆಸರಿನಲ್ಲಿ ನಾಲ್ಕು ವಿಭಾಗವಿದೆ. ಒಂದೊಂದು ವಿಭಾಗದವರು ಆಯಾ ವೇದವನ್ನು ಅಧ್ಯಯನ ಮಾಡಿ, ಪೀಳಿಗೆಯಿಂದ ಪೀಳಿಗೆಗೆ ಅದನ್ನು ತಲುಪಿಸಿ ಉಳಿಸುವ ಉದ್ದೇಶ ಇದರಲ್ಲಿದೆ. ಶ್ರಾವಣ ಮಾಸದ ಶುಕ್ಲಪಕ್ಷದ ಚತುರ್ದಶಿಯ ದಿನ ಋಗ್ವೇದಿಗಳಾದ ನಮಗೆ ಉಪಾಕರ್ಮ ಆಚರಿಸುವ ದಿನ. ಉಪಾಕರ್ಮವನ್ನು ವರ್ಷಕ್ಕೊಮ್ಮೆ ಬ್ರಾಹ್ಮಣನು ತಾನು ಬ್ರಾಹ್ಮಣನಾಗಿ (ಧಾರ್ಮಿಕವಾಗಿ) ಪಡೆದಿರುವ ವಿಶೇಷ ಅಧಿಕಾರಗಳನ್ನು ಪುನರೂರ್ಜಿತಗೊಳಿಸುವ ದಿನವೆನ್ನಬಹುದು. ಅಂದು ದಿನನಿತ್ಯವೂ ಪಾಲಿಸಬೇಕಾದ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಪಾಲಿಸುವಲ್ಲಾದ ದೋಷಗಳಿಗೆ ಪರಿಹಾರಾರ್ಥವಾಗಿ ಉತ್ಸರ್ಜನ ಚರು ಹೋಮ ಹಾಗೂ ಉಪಾಕರ್ಮ ದಧಿಸಕ್ತು ಹೋಮಗಳನ್ನು ಮಾಡಿ, ಋಗ್ವೇದದ ಹತ್ತು ಮಂಡಲಗಳ ಮೊದಲ



ಹಾಗೂ ಕೊನೆಯ ಮಂತ್ರಗಳನ್ನು ಪಠಿಸುತ್ತಾ ಮೊಸರು ಹಾಗೂ ಅರಳು (ಪೊದ್ದೊಳು) ಇದರ ಹವಸ್ಸನ್ನು ಯಜ್ಞಾಹುತಿಯಾಗಿ ಸಮರ್ಪಿಸಬೇಕು. ನಂತರ ಗಾಯತ್ರಿ, ಪಂಚಾಕ್ಷರಿ,ಅಷ್ಟಾಕ್ಷರಿ ಮಂತ್ರ ಜಪಿಸಿ ಹೊಸ ಯಜ್ಞೋಪವೀತವನ್ನು ಧರಿಸಿ ದೇವರಿಗೆ, ಋಷಿಗಳಿಗೆ ಹಾಗೂ ಪಿತೃಗಳಿಗೆ ತರ್ಪಣವನ್ನು ನೀಡಬೇಕು. ಹೀಗೆ ಪ್ರತಿ ಸಂವತ್ಸರವೂ ಹೊಸ ಯಜ್ಞೋಪವೀತವನ್ನು ಶಾಸ್ತ್ರೋಕ್ತವಾಗಿ ಧರಿಸಿದಾಗ ಮಾತ್ರ ಬ್ರಾಹ್ಮಣನಿಗೆ ವೇದಾಭ್ಯಾಸ, ಪಿತೃಶ್ರಾದ್ಧವೇ ಮುಂತಾದ ಕಾರ್ಯಗಳಿಗೆ ಅಧಿಕಾರ ಸಿದ್ಧಿಯಾಗುತ್ತದೆ ಎಂಬ ಭಾವನೆ ಇದೆ. ಹೊಸದಾಗಿ ಉಪನಯನವಾದ ವಟುವು ಮೊದಲನೆಯ ಉಪಾಕರ್ಮದಂದು ದಧಿಸಕ್ತು ಹೋಮದೊಂದಿಗೇ ಹಳೆಯ ಜನಿವಾರವನ್ನು ವಿಸರ್ಜಿಸಿ ಹೊಸದನ್ನು ಧರಿಸುವ ಕ್ರಮವಿದೆ.

ತಾ.28-08-2015ರ ಶುಕ್ರವಾರದಂದು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಶಾರದಾ ಮಂಟಪದ ಆವರಣದಲ್ಲಿರುವ ಜ್ಞಾನಮಂದಿರದಲ್ಲಿ ಉಪಾಕರ್ಮದ ಆಚರಣೆ ನಡೆಯಿತು. ಋತ್ವಿಜರಾದ ಶ್ರೀ ನಾಗರಾಜ ಭಟ್ ಹಾಗೂ ಶ್ರೀ ಪಾವಂಜೆ ರವಿ ಉಪಾಧ್ಯಾಯರ ನೇತೃತ್ವದಲ್ಲಿ ಸಮಾಜ ಬಾಂಧವರು ಯಜ್ಞಕ್ಕೆ ಹವಿಸ್ಸನ್ನು ಸಮರ್ಪಿಸಿ ಹೊಸ ಯಜ್ಞೋಪವೀತ ಧರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾವ್, ಉಪಾಧ್ಯಕ್ಷರಾದ ಶ್ರೀ ಎಸ್. ಎಂ. ರಾವ್ ಹಾಗೂ ಡಾ। ವೈ. ಸುದರ್ಶನ್ ರಾವ್, ಕಾರ್ಯದರ್ಶಿ ಸುರೇಶ ರಾವ್, ಕೋಶಾಧಿಕಾರಿ ಶ್ರೀ ಕೆ. ಸುಧಾಕರ್ ರಾವ್, ಜತೆಕಾರ್ಯದರ್ಶಿ ಶ್ರೀ ಐ. ಕೆ. ಜಯಚಂದ್ರ ರಾವ್, ಸಲಹೆಗಾರರಾದ ಶ್ರೀ ಫಾಲಚಂದ್ರ ರಾವ್, ಶ್ರೀ ಸಿ.ಎಸ್.ರಾವ್, ಶ್ರೀ ಪ್ರಫುಲ್ಲಚಂದ್ರರಾವ್‌ರಾದಿಯಾಗಿ ನೂರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

## ಮಹಿಳಾ ವೇದಿಕೆಯಿಂದ ವರಮಹಾಲಕ್ಷ್ಮೀ ವ್ರತ



ತಾ.28-08-2015ರ ಗುರುವಾರ ಸಾಯಂಕಾಲ ಮಹಿಳಾವೇದಿಕೆಯ ವತಿಯಿಂದ ಶ್ರೀ ಶಾರದಾ ಮಂಟಪದಲ್ಲಿ ವರಮಹಾಲಕ್ಷ್ಮೀ ವ್ರತವನ್ನು ಆಚರಿಸಲಾಯಿತು. ಸಮುದ್ರಮಥನದ ಸಂದರ್ಭದಲ್ಲಿ ಶ್ರೀ ಲಕ್ಷ್ಮೀದೇವಿಯು ಮೇಲೆದ್ದು ಬಂದು ಆಶೀರ್ವದಿಸಿದ ಪೌರಾಣಿಕ ಹಿನ್ನೆಲೆಯುಳ್ಳ, ಶ್ರಾವಣ ಮಾಸದ ಶುಕ್ಲಪಕ್ಷದ ಎರಡನೆಯ ಶುಕ್ರವಾರದಂದು ಬರುವ ಈ ಹಬ್ಬವನ್ನು ಸಂಘವು ಪ್ರತೀ ವರ್ಷವೂ ಆಚರಿಸುತ್ತಿದೆ. ಬ್ರಹ್ಮಶ್ರೀ ನಾಗಭೂಷಣ ಶಾಸ್ತ್ರಿಯವರ ನೇತೃತ್ವದಲ್ಲಿ ವರಮಹಾಲಕ್ಷ್ಮಿಯನ್ನು ಮಹಿಳಾ ವೇದಿಕೆಯ ನೂರಕ್ಕೂ ಹೆಚ್ಚು ಸದಸ್ಯರು ಹಾಗೂ ಪರಿಸರದ ಭಕ್ತರು ಒಂದಾಗಿ ಕುಂಕುಮಾರ್ಚನೆಯೊಂದಿಗೆ ಆರಾಧಿಸಿ ಕುಟುಂಬದ ಹಾಗೂ ಸಮಾಜದ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿದರು.

ಮುಂಜಾನೆಯಿಂದ ಉಪವಾಸವಿದ್ದ ಮಹಿಳಾ ವೇದಿಕೆಯ ಸದಸ್ಯೆಯರು ವೇದಿಕೆಯನ್ನು ರಂಗೋಲಿ, ತಳಿರುತೋರಣಗಳಿಂದ ಅಲಂಕರಿಸಿ, ಹೂಗಳಿಂದ ಶೃಂಗರಿಸಿದ್ದರು, ಗೋಧೂಳೀ ಲಗ್ನದಲ್ಲಿ ಕಾರ್ಯಕ್ರಮವು ಆರಂಭವಾಯಿತು. ವ್ರತದ ಅಂಗವಾಗಿ ಹನ್ನೆರಡು ಗಂಟಿನ ದಾರವನ್ನು ದೇವರ ಮುಂದೆ ಇಟ್ಟು ಪೂಜಿಸಿ ಕೈಗೆ ಕಟ್ಟಿಕೊಂಡರು. ಮಹಾಲಕ್ಷ್ಮಿದೇವಿಗೆ ಅಂದು ಬಿಲ್ವಾರ್ಚನೆ ಹಾಗೂ ಕಡಲೆ ಬೇಳೆಯಿಂದ ತಯಾರಿಸಿದ ಭಕ್ಷ್ಯವನ್ನು ನೈವೇದ್ಯವಾಗಿ ಸಮರ್ಪಿಸುವುದು ಇನ್ನೊಂದು ವಿಶೇಷ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.



॥ ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ ॥

### ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ಮನ್ಮಥ ನಾಮ ಸಂವತ್ಸರದ ತುಲಾ ಮಾಸ ದಿನ ೫ ಸಲುವ ಅಶ್ವಯುಜ ಶುದ□(ನವಮಿ) ೯ ಯು, ತಾ.22-10-2015ನೇ ಗುರುವಾರ

**ವಿಜಯದಶಮಿ ದಿನದಂದು**

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ.
ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

ವೈ. ಭುವನೇಂದ್ರ ರಾವ್
ಅಧ್ಯಕ್ಷರು

ಕೆ. ಸುರೇಶ್ ರಾವ್
ಕಾರ್ಯದರ್ಶಿ

ಹಾಗೂ
ಆಡಳಿತ ಮಂಡಳಿಯ ಸವಿನಯ ಆಮಂತ್ರಣ

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಬ್ರಾಹ್ಮಣ್ಯವೆಂಬುದು ಒಂದು ಜಾತಿಯಲ್ಲ, ಸಂಸ್ಕೃತಿ. ಈ ಸಂಸ್ಕೃತಿಯು ಆಚಾರವಿಚಾರ, ಆರೋಗ್ಯ, ಆಹಾರ, ದಿನಚರಿ, ಭಾಷೆ, ಜ್ಞಾನ, ಹವ್ಯಾಸ ಹೀಗೆ ಯಾವ ದೃಷ್ಟಿಯಲ್ಲಿ ಪರಿಗಣಿಸಿದರೂ ಅತ್ಯಂತ ವಿಕಾಸವಾದ ಹಾಗೂ ಜಗತ್ತಿನಲ್ಲಿ ಇರುವ, ಇದ್ದ ಎಲ್ಲಾ ಸಂಸ್ಕೃತಿಗಳಿಗಿಂತ ಪರಿಪೂರ್ಣವಾದ ಸಂಸ್ಕೃತಿಯೆಂಬುದರಲ್ಲಿ ಎರಡು ಮಾತಿಲ್ಲ. ಆದುದರಿಂದಲೇ ಬ್ರಾಹ್ಮಣರಿಗೆ ವಿಶೇಷ ಗೌರವವು ಸಮಾಜದಲ್ಲಿ ತನ್ನಿಂತಾನಾಗೇ ಸಲ್ಲುತ್ತಿದೆ.

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅನುಕೂಲ ಶಾಸ್ತ್ರಕ್ಕೆ ಪ್ರಾಶಸ್ತ್ಯ, ಹಾಗಾಗಿ ಅದು ಸರ್ವಜನಪ್ರಿಯವಾದ ಸಂಸ್ಕೃತಿಯಾಗುತ್ತಿದೆ, ಅನಿವಾರ್ಯವೂ ಆಗಿದೆ. ಅನುಕೂಲ ಶಾಸ್ತ್ರದ ಗಡಿಬಿಡಿಯಲ್ಲಿ ನಾವು ನಮ್ಮ ಬ್ರಾಹ್ಮಣ ಸಂಸ್ಕೃತಿಯನ್ನು ಮರೆಯಬಾರದಲ್ಲವೇ. ನೆನೆಪಿಡಿ, ನಮ್ಮ ಸಂಸ್ಕೃತಿ ನಮ್ಮ ಆಚರಣೆಯಲ್ಲಿದೆಯಷ್ಟೇ ವಿನಃ ಪುಸ್ತಕಗಳಲ್ಲಿ ಬರೆದಿಟ್ಟಿಲ್ಲ. ಹಾಗಾಗಿ ನಾವು ಪಾಲಿಸಿದರೆ ಮಾತ್ರ ಅದನ್ನು ಮುಂದಿನ ಪೀಳಿಗೆಗೆ ತಲುಪಿಸಲು ಸಾಧ್ಯವಿದೆ.

ನಮ್ಮ ಸ್ಥಾನಿಕ ಸಮಾಜದ ಏಳಿಗೆಯಲ್ಲಿ ಅನೇಕ ಸಂಘಗಳು ಪ್ರಮುಖ ಪಾತ್ರವಹಿಸಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಅಷ್ಟೇ ಮುಖ್ಯವಾದ, ನಾವು ಬ್ರಾಹ್ಮಣ ಎಂದು ಕರೆಯಿಸಿಕೊಳ್ಳಲು ಬೇಕೇ ಬೇಕಾದ ನಮ್ಮ ಸಂಸ್ಕೃತಿಯನ್ನು ಉಳಿಸಿ ಪೋಷಿಸುವ ಕೆಲಸವನ್ನು ಶತ ಶತಮಾನಗಳಿಂದ ಮಾಡುತ್ತಿರುವ ಕೆಲವು ದೇವಸ್ಥಾನಗಳ ಕೆಲಸ ನಮ್ಮ ಗಮನಕ್ಕೆ ಬರುವುದೇ ಇಲ್ಲ. ಇವಲ್ಲಿ ಕೆಲವು ದೇವಸ್ಥಾನಗಳು ಎಂಟನೇ ಶತಮಾನದಷ್ಟು ಹಳೆಯವು. ಒಂದು ಕಾಲದಲ್ಲಿ ತುಳುನಾಡಿನಲ್ಲಿದ್ದ ಎಲ್ಲಾ ದೇವಸ್ಥಾನಗಳು ನಮ್ಮ ಸುಪರ್ದಿಯಲ್ಲಿದ್ದವಂತೆ. ಈಗ ಮೂವತ್ತರಷ್ಟು ಸಂಖ್ಯೆಯ ಆಸುಪಾಸಿನಲ್ಲಿ ನಮ್ಮವರ ಆಡಳಿತ ಹಾಗೂ ಅರ್ಚಕತನದಲ್ಲಿರುವ ದೇವಸ್ಥಾನಗಳಿದ್ದು ನಮ್ಮತನವನ್ನು ಪೋಷಿಸುವ ಕೆಲಸವನ್ನು ಸದ್ದಿಲ್ಲದೇ ಮಾಡುತ್ತಿವೆ. ಈ ದೇವಸ್ಥಾನಗಳಲ್ಲಿ ಕೆಲವು ಎಂಟನೇ ಹಾಗೂ ಹನ್ನೆರಡನೇ ಶತಮಾನಕ್ಕೆ ಸೇರಿದ್ದು ಸ್ಥಾನಿಕರ ಭವ್ಯ ಇತಿಹಾಸವನ್ನು ಸಾರಿ ಹೇಳುತ್ತಿರುವ ಸಾಕ್ಷಿಗಳಾಗಿವೆ.

ಒಂದು ಸಂಘಕ್ಕೆ ಸಾವಿರಾರು ಸದಸ್ಯರಿರುತ್ತಾರೆ, ಸದಸ್ಯತನ ಶುಲ್ಕವಿದೆ. ಕೆಲವು ಸಂಘಗಳಿಗೆ ವ್ಯವಹಾರದಿಂದಾಗಿ ವರಮಾನದ ಮೂಲವೂ ಇದೆ. ವಿದ್ಯಾರ್ಥಿವೇತನ, ವೈದ್ಯಕೀಯ ಸಹಾಯ ಇತ್ಯಾದಿ ಸಾಮಾಜಿಕ ಚಟುವಟಿಕೆಯಿಂದ ಪ್ರಚಾರವೂ ಇದೆ. ಆದರೆ ದೇವಸ್ಥಾನಗಳನ್ನು ಗಮನಿಸಿ, ಹಿಂದೆ ಗ್ರಾಮದೇವಸ್ಥಾನಗಳಾಗಿದ್ದ ಹಾಗೂ ರಾಜಮಹಾರಾಜರ ಉಂಬಳಿಯಿದ್ದ ನಮ್ಮ ದೇವಸ್ಥಾನಗಳ ಪರಿಸ್ಥಿತಿ ಬದಲಾಗಿದ್ದು, ಈಗ ಆಯಾ ಮನೆತನದವರೇ ನಡೆಸಬೇಕಾಗಿದೆ. ಆದಾಯವು ಅತ್ಯಂತ ಕಡಿಮೆ ಇದೆ. ಪ್ರತಿ ದಿನವು ಶಾಸ್ತ್ರೋಕ್ತವಾಗಿ ಸಲ್ಲಬೇಕಾದ ತ್ರಿಕಾಲ ಪೂಜೆ, ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ, ಉತ್ಸವ ಹೀಗೆ ಯಾವುದೇ ಕಾರ್ಯಕ್ರಮವನ್ನು ನಡೆಸಲು ಕಾರ್ಯಕರ್ತರ ಕೊರತೆ ಹಾಗೂ ಉತ್ಸಾಹ ಸಾಮೂಹಿಕವಾಗಿ ಎಲ್ಲಾ ದೇವಸ್ಥಾನಗಳನ್ನು ಕಾಡುತ್ತಿದೆ. ಅದರೊಂದಿಗೆ ಅರ್ಚಕವೃತ್ತಿಗೆ ಇಳಿಯುವವರ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಿದ್ದು ಇರುವ ಅರ್ಚಕರು ರಜೆಯಲ್ಲಿ ಹೋದಾಗ ಯಜಮಾನನೇ ಪೂಜೆ ಮಾಡಬೇಕಾದ ಪರಿಸ್ಥಿತಿ ಕೆಲವೊಂದು ಕಡೆ ಇದೆ.

ನಮ್ಮವರ ಆಡಳಿತ/ಅರ್ಚಕತನದಲ್ಲಿ ಶತಶತಮಾನಗಳಷ್ಟು ಹಳೆಯ ಹಾಗೂ ಹೊಸ ದೇವಸ್ಥಾನಗಳು ಇವೆ ಎಂಬುದು ನಮಗೆ ಹೆಮ್ಮೆಯ ವಿಷಯ. ನಮ್ಮ ಸಮಾಜದ ಅಭಿವೃದ್ಧಿ ಕೇವಲ ವ್ಯಾವಹಾರಿಕವಾಗಿ ಮಾತ್ರವಾಗದೇ ಧಾರ್ಮಿಕವಾಗಿಯೂ ಆಗಬೇಕು. ಸ್ಥಾನಿಕರು ಆರ್ಥಿಕವಾಗಿ ವ್ಯಾವಹಾರಿಕವಾಗಿ ಹಾಗೂ ಧಾರ್ಮಿಕವಾಗಿ ಸಂತುಲಿತ ಸಮಾನ ಅಭಿವೃದ್ಧಿ ಹೊಂದಿ ಸಮಾಜದಲ್ಲಿ ಇತರರಿಗೆ ಮಾದರಿಯಾಗಬೇಕೆಂಬ ಆಶಯ ಈ ಹಿಂದೆ ನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ವ್ಯಕ್ತವಾಗಿತ್ತು. ಅಲ್ಲಿ ನಮ್ಮ ದೇವಸ್ಥಾನಗಳ ಅಭಿವೃದ್ಧಿಗಾಗಿ ದೇವಸ್ಥಾನಗಳ ಒಕ್ಕೂಟವನ್ನೂ ರಚಿಸಲಾಗಿದ್ದು ಅದು ಕಾರ್ಯಾರಂಭ ಮಾಡಿದೆ. ಅದರೊಂದಿಗೆ ದೇವಸ್ಥಾನದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎನ್.ಕೆ.ಜಗನ್ನಿವಾಸ ರಾಯರು ಕರ್ನಾಟಕ ರಾಜ್ಯ ಸರಕಾರದ ಧಾರ್ಮಿಕ ಪರಿಷತ್ತಿನ ಸದಸ್ಯರಾಗಿರುವುದು ಧನಾತ್ಮಕ ವಿಷಯ. ಹಾಗಾಗಿ ನಮ್ಮ ಸಮಾಜದ ಹಿರಿಯರೆಲ್ಲರೂ ಸೇರಿ ನಮ್ಮ ದೇವಸ್ಥಾನಗಳ ಅಭಿವೃದ್ಧಿಗೆ ಒಂದು ಮಾಸ್ಟರ್ ಪ್ಲಾನ್ ತಯಾರಿಸಲು ಇದು ಸಕಾಲ.

ಈ ಸಂಚಿಕೆಯೊಂದಿಗೆ ನಮ್ಮವರ ಆಡಳಿತದಲ್ಲಿರುವ ದೇವಸ್ಥಾನಗಳ ಪರಿಚಯ ನೀಡುವ ಅಂಕಣವೊಂದನ್ನು ಆರಂಭಿಸುತ್ತಿದ್ದೇವೆ. ನಮ್ಮವರ ಆಡಳಿತದಲ್ಲಿರುವ ಎಲ್ಲಾ ದೇವಸ್ಥಾನಗಳನ್ನು ಈ ಅಂಕಣದಲ್ಲಿ ಒಂದೊಂದಾಗಿ ನಮ್ಮ ಸಮಾಜ ಬಾಂಧವರಿಗೆ ಪರಿಚಯಿಸುವ ಉದ್ದೇಶ ಇದರಲ್ಲಿದೆ. ಸಮಾಜ ಬಾಂಧವರು ತಪ್ಪದೇ ಈ ದೇವಸ್ಥಾನಗಳಿಗೆ ಭೇಟಿ ನೀಡಿ, ಈ ಎಲ್ಲಾ ದೇವಸ್ಥಾನಗಳ ಕಾರ್ಯಕ್ರಮಗಳಲ್ಲಿ ಭಾಗಿಗಳಾದರೆ ಈ ಅಂಕಣದ ಶ್ರಮ ಸಾರ್ಥಕವಾಗುತ್ತದೆ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ್ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ



ಶ್ರೀ ಶಾರದಾ ಪತ್ರಿಕೆಯ ಓದುಗರಿಗೆ
ಶ್ರೀ ಗಣೇಶ ಚತುರ್ಥಿಯ ಶುಭಾಶಯಗಳು

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-1

## ಕಡಬ ಶ್ರೀ ಶ್ರೀಕಂಠಸ್ವಾಮಿ ಹಾಗೂ ಶ್ರೀ ಮಹಾಗಣಪತಿ ದೇವಸ್ಥಾನ

- ಶ್ರೀ.ಕೆ.ಗೋಪಾಲ್ ರಾವ್

ಆದಿ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರು 1200 ವರ್ಷಗಳ ಹಿಂದೆ ಬರೆದಿರುವ ಶಂಕರ ವಿಜಯ ಎಂಬ ಗ್ರಂಥದಲ್ಲಿ ಶ್ರೀ ಶ್ರೀ ಶಂಕರಾಚಾರ್ಯರು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಬಂದವರು ಕೊಲ್ಲೂರಿಗೆ ಹೋಗುವ ದಾರಿಯ ಮಧ್ಯೆ ಕಡಬದ ಶ್ರೀ ಶ್ರೀಕಂಠಸ್ವಾಮೀ ದೇವಸ್ಥಾನಕ್ಕೆ ಬಂದು ಕೆಲಕಾಲವಿದ್ದು ಆರಾಧಿಸಿದ್ದರೆಂದು ಉಲ್ಲೇಖವಿರುವ ದೇವಸ್ಥಾನವಿದು. ಶ್ರೀ ಶ್ರೀ ಶಂಕರಾಚಾರ್ಯರ ಕಾಲ ಕ್ರಿ.ಶ 788-820 ಆದುದರಿಂದ 1200 ವರ್ಷಕ್ಕೂ ಪುರಾತನವಾದ ದೇವಸ್ಥಾನವೆಂದು ಊಹಿಸಬಹುದು.



ಮಂಗಳೂರು ಉಪ್ಪಿನಂಗಡಿ ಮಾರ್ಗವಾಗಿ ಸುಬ್ರಹ್ಮಣ್ಯಕ್ಕೆ ಹೋಗುವಾಗ ಉಪ್ಪಿನಂಗಡಿಯಿಂದ 32 ಕಿ.ಮೀ ಕ್ರಮಿಸಿದ ನಂತರ ಹಾಗೂ ಸುಬ್ರಹ್ಮಣ್ಯದಿಂದ 24 ಕಿ.ಮೀ ದೂರವಿರುವಾಗ ಕಡಬ ಪೇಟೆ ಸಿಗುತ್ತದೆ. ಪೇಟೆಯ ಕೊನೆಯಲ್ಲಿ ದೇವಸ್ಥಾನಕ್ಕೆ ಹೋಗುವ ಮಹಾದ್ವಾರದಿಂದ ಒಂದು ಕಿ.ಮೀ. ದೂರದಲ್ಲಿ ಈ ದೇವಸ್ಥಾನವಿದೆ . ಕದಂಬರ ಕೊನೆಯ ಪಾಳೆಯಗಾರನಾದ ರಂಗರಾಜನು ಕಡಬವನ್ನು ಬಿಟ್ಟು ಹೋಗುವಾಗ ದೇವಾಲಯ ಹಾಗೂ ಆಸುಪಾಸಿನ ಜಮೀನನ್ನು ಶ್ಯಾನುಭಾಗರಾದ ಸ್ಥಾನಿಕ ಬ್ರಾಹ್ಮಣ ಮನೆತನದ ಕುಂಭಾಟ್ ವಂಶಸ್ಥರಿಗೆ ಒಪ್ಪಿಸಿದನೆಂಬುದು 800 ವರ್ಷಗಳ ಹಿಂದಿನ ಇತಿಹಾಸ. 1897 ರಲ್ಲಿ ಕುಂಭಾಟ್ ಸುಬ್ರಾಯ ಶ್ಯಾನುಭಾಗರವರು ಆಡಳಿತ ನಡೆಸಿಕೊಂಡು ಬಂದ ದಾಖಲೆಯು ಈ ಬಗ್ಗೆ ದೇವಾಲಯದಲ್ಲಿ ಲಭ್ಯವಿರುವ ಹಳೆಯ ದಾಖಲೆಯಾಗಿದೆ. ಅಂದಿನಿಂದ ಇದೇ ಕುಟುಂಬದವರೇ ಈ ದೇವಸ್ಥಾನಗಳನ್ನು ನಡೆಸಿಕೊಂಡು ಹಾಗೂ ಜೀರ್ಣೋದ್ಧಾರ ಮಾಡಿಕೊಂಡು ಬಂದ ದಾಖಲೆಗಳಿದ್ದು ಪ್ರಸ್ತುತ ಶ್ರೀ ಕುಂಬಾಟ್ ಗೋಪಾಲರಾವ್ ಅನುವಂಶಿಕ ಹಾಗೂ ಆಡಳಿತ ಮೊಕ್ತೇಸರರಾಗಿರುತ್ತಾರೆ. ಇವರ ಪ್ರಯತ್ನದಿಂದ ದೇವಾಲಯವು ಸಮಗ್ರವಾಗಿ ಜೀರ್ಣೋದ್ಧಾರಗೊಂಡು 2006ನೇ ಇಸವಿಯಲ್ಲಿ ಬ್ರಹ್ಮಕಲಶ ನೆರವೇರಿರುತ್ತದೆ. ಸದ್ಯ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿರುತ್ತದೆ.

ಈ ದೇವಸ್ಥಾನವು ಸುತ್ತಮುತ್ತಲಿನ ಗ್ರಾಮಗಳಿಗೆ ಸೀಮೆದೇವಸ್ಥಾನವಾಗಿದ್ದು , ಕದಂಬರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಶ್ರೀ ಶ್ರೀಕಂಠಸ್ವಾಮಿಯನ್ನು ಸಿರಿಕಂಠ ಎಂದೂ ಕರೆಯುತ್ತಿದ್ದರು. ತುಳುನಾಡಿನ ಪಾಡ್ದನಗಳಲ್ಲಿ ಈ ಶಬ್ದ ಈಗಲೂ ಕಂಡುಬರುತ್ತದೆ. ಶ್ರೀಕಂಠಸ್ವಾಮಿ ದೇವರ ಲಿಂಗದ ತಲೆಭಾಗ ಚಪ್ಪಟೆಯಾಗಿದ್ದು ಲಿಂಗದ ಮಧ್ಯೆ ಎದುರುಗಡೆ ಒಂದು ನೀಳವಾದ ಸುಂದರ ರೇಖೆ ಇದೆ. ಪಾಣಿಪೀಠವು ಕೆತ್ತನೆಗಳಿಂದ ಕೂಡಿದೆ. ಈ ದೇವರನ್ನು ನಾದಪ್ರಿಯ, ವೇದಪ್ರಿಯ ಎನ್ನುತ್ತಾರೆ. ಹಿಂದೆ ಇಲ್ಲಿ ವೇದಶಾಲೆ, ಸಂಗೀತಶಾಲೆ ಇತ್ತೆಂದು ಹಿರಿಯರು ಹೇಳುತ್ತಾರೆ.

ಶ್ರೀ ಮಹಾಗಣಪತಿ ದೇವಸ್ಥಾನವು ಶ್ರೀಕಂಠಸ್ವಾಮಿ ದೇವಸ್ಥಾನದ ಪಕ್ಕದಲ್ಲೇ ಇದೆ. ಎರಡೂ ಪ್ರಧಾನ ದೇವಾಲಯಗಳಾಗಿವೆ. ಎರಡೂ ಗರ್ಭಗುಡಿಯ ಮುಂದೆ ತೀರ್ಥಮಂಟಪಗಳಿವೆ. ಪ್ರತ್ಯೇಕವಾದ ಮಹಾದ್ವಾರಗಳಿವೆ. ಉಪದೇವತೆಗಳಿಲ್ಲ. ಸುತ್ತು ಪೌಳಿ ಮಾತ್ರ ಒಂದೇ ಇದೆ. ತಂದೆ ಮಗ ಅಕ್ಕಪಕ್ಕದಲ್ಲಿದ್ದು ಸ್ವತಂತ್ರವಾಗಿರುವುದು ಇಲ್ಲಿಯ ವಿಶೇಷ. ಗಣಪತಿಯ ಶಿಲಾವಿಗ್ರಹವು ಚತುರ್ಭುಜನಾಗಿ ಪಾಶ, ಅಂಕುಶ, ಮೋದಕ, ದಂತಧಾರಿಯಾಗಿದೆ. ಸೊಂಡಿಲಿನ ತುದಿಯು ಎಡಕ್ಕೆ ವೃತ್ತಾಕಾರವಾಗಿ ತಿರುಗಿ ಮಧ್ಯೆ ಒಂದು ರತ್ನಕಲಶವಿದೆ. ವಿಗ್ರಹದ ಕಿರೀಟವು ಗೋಪುರಾಕಾರವಾಗಿದ್ದು ಜಟಾಮುಕುಟವಾಗಿದೆ.

ಶ್ರೀ ಶ್ರೀಕಂಠಸ್ವಾಮಿಯ ಪಕ್ಕದಲ್ಲಿ ಹಿಂದೆ ರಸಭಾವಿಯಿತ್ತಂತೆ. ಈ ಬಾವಿಯಲ್ಲಿ ಕಬ್ಬಿಣ ಹಾಕಿದರೆ ಬಾವಿಯಲ್ಲಿ ಸಿದ್ಧರಸವಿರುವುದರಿಂದ ಅದು ಒಂದು ವರ್ಷದಲ್ಲಿ ಚಿನ್ನವಾಗುತ್ತಿತಂತೆ. ಕದಂಬರ ಕಾಲದಲ್ಲಿ ರೈತರು ಕಬ್ಬಿಣದ ಗುಳ (ಪನ್ನೀರು)ವನ್ನು ಕಾಣಿಕೆಯಾಗಿ ರಾಜನಿಗೆ ಒಪ್ಪಿಸುತ್ತಿದ್ದರಂತೆ. ಎಲ್ಲರ ಸಮ್ಮುಖ ಪ್ರಾರ್ಥಿಸಿ ಇದನ್ನು ಬಾವಿಗೆ ಹಾಕಿದ ಒಂದು ವರ್ಷದ ನಂತರ ಅದು ಚಿನ್ನವಾಗಿರುತ್ತಿತ್ತಂತೆ. ಕದಂಬರ ಪಾಳೆಯಗಾರನಾದ ರಂಗರಾಜನಿಗೆ ಈ ರಸಬಾವಿಯ ದುರುಪಯೋಗವಾಗುತ್ತಿರುವುದು ಕನಸ್ಸಿನಲ್ಲಿ ತಿಳಿಸಿ, ದೇವಾಲಯದ ಹಿಂಭಾಗದಲ್ಲಿರುವ ಕೋಟೆಗಣಪತಿಯನ್ನು ರಸಬಾವಿಯ ಮೇಲೆ ಹಾಸುಗಲ್ಲು ಹಾಕಿ ಗುಡಿಕಟ್ಟಿ ಪ್ರತಿಷ್ಠಾಪಿಸುವಂತೆ ಆದೇಶವಾಯಿತಂತೆ. ಇದು ಈ ದೇವಾಲಯದ ಬಗ್ಗೆ ಪ್ರಚಾರದಲ್ಲಿರುವ ಕಾರಣಿಕ ಕಥೆ.

ದೇವಾಲಯದಲ್ಲಿ ಮೃತ್ಯುಂಜಯ ಹೋಮ, ನವಗ್ರಹ ಶಾಂತಿ ಹೋಮ ನಡೆಯುತ್ತಿರುತ್ತವೆ. ರುದ್ರಾಭಿಷೇಕ ಹಾಗೂ ರಂಗಪೂಜೆ ಇಲ್ಲಿನ ಪ್ರಧಾನ ಸೇವೆಗಳಾಗಿವೆ. ಮಹಾಶಿವರಾತ್ರಿ, ಗಣೇಶ ಚತುರ್ಥಿ ಹಾಗೂ ಸಾಮಾನ್ಯವಾಗಿ ಫೆಬ್ರವರಿ ಎರಡು ಅಥವಾ ಮೂರನೇ ತಾರೀಖಿನಂದು ಆಚರಿಸುವ ವರ್ಷಾವಧಿ ಉತ್ಸವಗಳು ವಿಜೃಂಭಣೆಯಿಂದ ಜರಗುತ್ತದೆ. ಈ ದೇವಸ್ಥಾನಗಳಿಗೆ ಭೇಟಿಯಿತ್ತು ಶ್ರೀ ಶ್ರೀಕಂಠಸ್ವಾಮೀ ಹಾಗೂ ಮಹಾಗಣಪತಿ ದೇವರಿಗೆ ಸೇವೆ ಸಲ್ಲಿಸಬಯಸುವರಿಗೆ ಆದರದ ಸ್ವಾಗತ. ಆಗಮಿಸುವವರು ಹಾಗೂ ಇನ್ನೂ ಮಾಹಿತಿ ಪಡೆಯಲಿಚ್ಛಿಸುವವರು ಮೊಕ್ತೇಸರರಾದ ಶ್ರೀ ಕುಂಭಾಟ್ ಗೋಪಾಲರಾಯರನ್ನು ಫೋನ್ ಸಂಖ್ಯೆ 9740259698ರಲ್ಲಿ ಸಂಪರ್ಕಿಸಬಹುದು.

*Power Cut !!!???*
*Install Best Quality Inverters...*
Mobile : 9483242111
K.S.Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**ಶ್ರೀಶಾರದಾ ದೇವಸ್ಥಾನ,** ಶ್ರೀಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.13-10-2015ರಿಂದ 21-10-2015ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

**- ಆಡಳಿತ ಮಂಡಳಿ**

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

**ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102**

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

**ತಾ.22-10-2015ನೇ ಗುರುವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.**

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಪ್ರಕೃತಿಯ ಚಿತ್ರ-Scenery) | 5-7ನೇ ತರಗತಿಯವರೆಗೆ (ಹಕ್ಕಿ ಪ್ರಪಂಚ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಹಬ್ಬ ಅಥವಾ ಜಾತ್ರೆ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (‘‘ಭಜ ಗೋವಿಂದಂ’’ ಕೆಳಗೆ ಕೊಟ್ಟಿರುವ ಶ್ಲೋಕಗಳು) | | 8ನೇ ತರಗತಿಯಿಂದ ಮೇಲ್ಪಟ್ಟು ಶ್ರೀಮಹಿಷಾಸುರಮರ್ದಿನಿ ಸ್ತೋತ್ರಂ | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಕನ್ನಡ ಆಶು-ಭಾಷಣ** ವಿದ್ಯಾರ್ಥಿಗಳಿಗೆ | 8ನೇ ತರಗತಿಯಿಂದ 10ನೇ ತರಗತಿಯವರೆಗೆ | | ಪದವಿಪೂರ್ವ ಮತ್ತು ಪದವಿ ತರಗತಿಯವರೆಗೆ | 3 ನಿಮಿಷ |
| **ಹಸೆಮಣೆ/ಶೋಭಾನೆ ಹಾಡುಗಳು** | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | |

**ವಿಶೇಷ ಸೂಚನೆಗಳು :**

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

**ಮಧ್ಯಾಹ್ನದ ಭೋಜನಾ ನಂತರ ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮ**

**ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ**

**‘‘ಭೀಷ್ಮ ವಿಜಯ’’ ಸಮಯ: ಸಂಜೆ 6-00ರಿಂದ 9-00**

## ಭಜ ಗೋವಿಂದಂ

**(7ನೇ ತರಗತಿಯವರೆಗಿನ ಮಕ್ಕಳಿಗೆ)**

ಭಜ ಗೋವಿಂದಂ ಭಜ ಗೋವಿಂದಂ ಗೋವಿಂದಂ ಭಜ ಮೂಢಮತೆ ।
ಸಂಪ್ರಾಪ್ತೇ ಸನ್ನಿಹಿತೇ ಕಾಲೆ ನಹಿನ ಹಿ ರಕ್ಷತಿ ಡುಕ್ರೃಂಕರಣೇ ।೧।

ಮೂಢ ಜಹೀಹಿ ಧನಾಗಮತೃಷ್ಣಾಂ ಕುರು ಸದ್ಬುದ್ಧಿಂ ಮನಸಿ ವಿತೃಷ್ಣಾಮ್।
ಯಲ್ಲಭಸೇ ನಿಜಕರ್ಮೋಪಾತ್ತಂ ವಿತ್ತಂ ತೇನ ವಿನೋದಯ ಚಿತ್ತಂ ।೨।

ನಾರೀಸ್ತನಭರನಾಭೀದೇಶಂ ದೃಷ್ಟ್ವಾ ಮಾಗಾ ಮೋಹಾವೇಶಂ ।
ಏತನ್ಮಾಂಸವಸಾದಿವಿಕಾರಂ ಮನಸಿ ವಿಚಿಂತಯ ವಾರಂ ವಾರಮ್ ।೩।

ನಲಿನೀದಲಗತಜಲಮತಿತರಲಂ ತದ್ವಜ್ಜೀವಿತಮತಿಶಯಚಪಲಮ್ ।
ವಿದ್ಧಿ ವ್ಯಾಧ್ಯಭಿಮಾನಗ್ರಸ್ತಂ ಲೋಕಂ ಶೋಕಹತಂ ಚ ಸಮಸ್ತಮ್ ।೪।

ಯಾವದ್ವಿತ್ತೋಪಾರ್ಜನಸಕ್ತಸ್ತಾವನ್ನಿಜಪರಿವಾರೋ ರಕ್ತಃ ।
ಪಶ್ಚಾಜ್ಜೀವತಿ ಜರ್ಜರದೇಹೇ ವಾರ್ತಾಂ ಕೋಽಪಿ ನ ಪೃಚ್ಛತಿ ಗೇಹೇ ।೫।

ಯಾವತ್ಪವನೋ ನಿವಸತಿ ದೇಹೆ ತಾವತ್ಪೃಚ್ಛತಿ ಕುಶಲಂ ಗೇಹೆ ।
ಗತವತಿ ವಾಯೌ ದೇಹಾಪಾಯೇ ಭಾರ್ಯಾ ಬಿಭ್ಯತಿ ತಸ್ಮಿನ್‌ಕಾಯೇ ।೬।

ಬಾಲಸ್ತಾವತ್ಕ್ರೀಡಾಸಕ್ತ ಸ್ತರುಣಾಸ್ತಾವತ್ತರುಣೀಸಕ್ತಃ ।
ವೃದ್ಧಸ್ತಾವಚ್ಚಿಂತಾಸಕ್ತ ಪರಮೇ ಬ್ರಹ್ಮಣಿ ಕೋಽಪಿ ನ ಸಕ್ತಃ ।೭।

ಕಾ ತೇ ಕಾಂತಾ ಕಸ್ತೇ ಪುತ್ರಃ ಸಂಸಾರೋಽಯಮತೀವ ವಿಚಿತ್ರಃ ।
ಕಸ್ಯ ತ್ವಂ ಕಃ ಕುತ ಆಯಾತಃ ಸ್ತತ್ವಂ ಚಿಂತಯ ತದಿಹ ಭ್ರಾತಃ ।೮।

ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಮ್ ।
ನಿರ್ಮೋಹತ್ವೆ ನಿಶ್ಚಲತತ್ವಂ ನಿಶ್ಚಲತತ್ವೇ ಜೀವನ್ಮುಕ್ತಿಃ ।೯।

ವಯಸಿ ಗತೇ ಕಃ ಕಾಮವಿಕಾರಃ ಶುಷ್ಕೇ ನೀರೇ ಕಃ ಕಾಸಾರಃ ।
ಕ್ಷೀಣೆ ವಿತ್ತೇ ಕಃ ಪರಿವಾರೋ ಜ್ಞಾತೇ ತತ್ತ್ವೇ ಕಃ ಸಂಸಾರಃ ।೧೦।

## ಶ್ರೀಮಹಿಷಾಸುರಮರ್ದಿನಿ ಸ್ತೋತ್ರಂ

**(8ನೇ ತರಗತಿಯಿಂದ ಮೇಲ್ಪಟ್ಟ ಮಕ್ಕಳಿಗೆ)**

ಅಯಿ ಗಿರಿನಂದಿನಿ ನಂದಿತಮೇದಿನಿ ವಿಶ್ವವಿನೋದಿನಿ ನಂದನುತೇ
ಗಿರಿವರವಿಂಧ್ಯಶಿರೋಧಿನಿವಾಸಿನಿ ವಿಷ್ಣುವಿಲಾಸಿನಿ ಜಿಷ್ಣುನುತೇ
ಭಗವತಿ ಹೇ ಶಿತಿಕಂಠಕುಟುಂಬಿನಿ ಭೂರಿಕುಟುಂಬಿನಿ ಭೂರಿಕೃತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೧ ।

ಸುರವರವರ್ಷಿಣಿ ದುರ್ಧರಧರ್ಷಿಣಿ ದುರ್ಮುಖಮರ್ಷಿಣಿ ಹರ್ಷರತೇ
ತ್ರಿಭುವನಪೋಷಿಣಿ ಶಂಕರತೋಷಿಣಿ ಕಿಲ್ಬಿಷಮೋಷಿಣಿ ಘೋಷರತೇ
ದನುಜನಿರೋಷಿಣಿ ದಿತಿಸುತರೋಷಿಣಿ ದುರ್ಮದಶೋಷಿಣಿ ಸಿಂಧುಸುತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೨ ।

ಅಯಿ ಜಗದಂಬ ಮದಂಬ ಕದಂಬವನಪ್ರಿಯವಾಸಿನಿ ಹಾಸರತೇ
ಶಿಖರಿಶಿರೋಮಣಿತುಂಗಹಿಮಾಲಯಶೃಂಗನಿಜಾಲಯ ಮಧ್ಯಗತೇ
ಮಧುಮಧುರೇ ಮಧುಕೈಟಭಗಂಜಿನಿ ಕೈಟಭಭಂಜಿನಿ ರಾಸರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೩ ।

ಅಯಿ ಶತಖಂಡವಿಖಂಡಿತರುಂಡವಿತುಂಡಿತಶುಂಡಗಜಾಧಿಪತೇ
ರಿಪುಗಜಗಂಡವಿದಾರಣಚಂಡಪರಾಕ್ರಮಶೌಂಡ ಮೃಗಾಧಿಪತೇ
ನಿಜಭುಜದಂಡನಿಪಾತಿತಚಂಡನಿಪಾತಿತಮುಂಡಭಟಾಧಿಪತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೪ ।

ಅಯಿ ರಣದುರ್ಮದಶತ್ರುವಧೋದಿತದುರ್ಧರನಿರ್ಜರಶಕ್ತಿಭೃತೇ
ಚತುರವಿಚಾರಧುರೀಣಮಹಾಶಿವದೂತಕೃತಪ್ರಮಥಾಧಿಪತೇ
ದುರಿತದುರೀಹದುರಾಶಯದುರ್ಮತಿದಾನವದೂತಕೃತಾಂತಮತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೫ ।

ಅಯಿ ಶರಣಾಗತವೈರಿವಧೂವರವೀರವರಾಭಯದಾಯಕರೇ
ತ್ರಿಭುವನಮಸ್ತಕಶೂಲವಿರೋಧಿಶಿರೋಧಿಕೃತಾಮಲಶೂಲಕರೇ
ದುಮಿದುಮಿತಾಮರದುಂದುಭಿನಾದಮಹೋಮುಖರೀಕೃತತಿಗ್ಮಕರೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೬ ।

ಅಯಿ ನಿಜಹುಂಕೃತಿಮಾತ್ರನಿರಾಕೃತಧೂಮ್ರವಿಲೋಚನಧೂಮ್ರಶತೇ
ಸಮರವಿಶೋಷಿತಶೋಣಿತಬೀಜಸಮುದ್ಭವಶೋಣಿತಬೀಜಲತೇ
ಶಿವಶಿವ ಶುಂಭನಿಶುಂಭಮಹಾಹವತರ್ಪಿತಭೂತಪಿಶಾಚರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೭ ।

ಧನುರನುಸಂಗರಣಕ್ಷಣಸಂಗಪರಿಸ್ಫುರದಂಗನಟತ್ಕಟಕೇ
ಕನಕಪಿಶಂಗಪೃಷತ್ಕನಿಷಂಗರಸದ್ಭಟಶೃಂಗಹತಾವಟುಕೇ
ಕೃತಚತುರಂಗಬಲಕ್ಷಿತಿರಂಗಘಟದ್ಬಹುರಂಗರಟದ್ಬಟುಕೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೮ ।

ಸುರಲಲನಾತತಥೇಯಿತಥೇಯಿತಥಾಭಿನಯೋತ್ತರನೃತ್ಯರತೇ
ಕಕುಭಾಂಪತಿಕೃತಥೋಂಗದತಾಲಕ ತಾಲಕುತೂಹಲನಾದರತೇ
ಧಿಮಿಕಿಟಧಿಕ್ಕಿಟಧಿಕಟಧಿಮಿಧ್ವನಿಧೀರಮೃದಂಗನಿನಾದರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೯ ।

ಜಯ ಜಯ ಜಪ್ಯಜಯೇ ಜಯಶಬ್ದಪರಸ್ತುತಿತತ್ಪರವಿಶ್ವನುತೇ
ಝಣ ಝಣ ಝಿಂಜಿಮಿ ಝಿಂಕೃತನೂಪುರಶಿಂಜಿತಮೋಹಿತಭೂತಪತೇ
ನಟಿತನಕಾರ್ಧನಟೀನಟನಾಯಕನಾಟಿತನಾಟ್ಯಸುಗಾನರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೧೦ ।

# ಮುಂಬೈಯಲ್ಲಿ ಅಸ್ತಂಗತರಾದ ಬೆಳ್ಳೆ ವಾಸುದೇವರಾವ್



ಮುಂಬೈ ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ (ರಿ) ಇದರ ಮಾಜಿ ಅಧ್ಯಕ್ಷ ಸಮಾಜದಲ್ಲಿ ಬಿ.ವಿ.ರಾಯರೆಂದೇ ಖ್ಯಾತರಾದ ಬೆಳ್ಳೆ ವಾಸುದೇವರಾಯರು (86ವರ್ಷ) ದಿನಾಂಕ 22-08-2015ರಂದು ಮುಂಬೈ ಘಾಟ್ಕೋಪರ್‌ನ ಸ್ವಗೃಹದಲ್ಲಿ ನಿಧನರಾದರು.

ಉಡುಪಿ ತಾಲೂಕು ಪಡುಬೆಳ್ಳೆಯ ದಿ| ಕಾಳಪ್ಪಯ್ಯ ಯಾನೆ ಗುರುರಾಜ ರಾವ್ ಮತ್ತು ದಿ| ಕೃಷ್ಣವೇಣಿ ದಂಪತಿಗಳ ಇಬ್ಬರು ಗಂಡು,ಹಾಗೂ ಆರು ಹೆಣ್ಣು ಮಕ್ಕಳಲ್ಲಿ ಓರ್ವರಾಗಿ ಜನಿಸಿದ ದಿವಂಗತರು ಕುಂಜಾರುಗಿರಿಯ ಶ್ರೀ ಗಿರಿಜಾ ಹಿ.ಪ್ರಾ.ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದು, ಕಟಪಾಡಿಯ ಎಸ್‌ವಿಎಸ್ ಪ್ರೌಢಶಾಲೆಯಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ತೇರ್ಗಡೆ ಹೊಂದಿದರು.

ಈ ಮೊದಲೇ ಇವರ ಹಿರಿಯ ಸಹೋದರ ಬೆಳ್ಳೆ ಭೋಜರಾಯರು (1986 ರಲ್ಲಿ ನಿಧನ ಹೊಂದಿರುತ್ತಾರೆ.)ಉಡುಪಿಯ ಕ್ರಿಶ್ಚಿಯನ್ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದಿದ್ದು, ಮೂಡುಬೆಳ್ಳೆಯ ಚರ್ಚ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ, ಮುಖ್ಯೋಪಾಧ್ಯಾಯರಾಗಿ ಖ್ಯಾತಿ ಹೊಂದಿ ತಮ್ಮ ಶಿಸ್ತು ಹಾಗೂ ಅತ್ಯುತ್ತಮ ಇಂಗ್ಲೀಷ್ ಜ್ಞಾನದಿಂದ ಮುಂಬೈಗೆ ತೆರಳಿ ಅಲ್ಲಿ ಜೈ ಭಾರತ್ ಇನ್ಶೂರೆನ್ಸ್ ಕಂಪೆನಿಯಲ್ಲಿ ಉದ್ಯೋಗಿಯಾದರು. ನಂತರ ಪ್ರಖ್ಯಾತ ನ್ಯೂ ಇಂಡಿಯಾ ಇನ್ಶೂರೆನ್ಸ್ ಕಂಪೆನಿಗೆ ಸೇರ್ಪಡೆಯಾಗಿ ಅಲ್ಲಿಯೇ ನಿವೃತ್ತರಾದರು. ಮುಂಬೈ ಅಂದೇರಿಯಲ್ಲಿ ವಾಸ್ತವ್ಯದಲ್ಲಿದ್ದ ಭೋಜರಾಯರು, ಸಹೋದರ ವಾಸುದೇವರಾಯರು ಮೆಟ್ರಿಕ್ ಪರೀಕ್ಷೆ ತೇರ್ಗಡೆಹೊಂದಿದ ನಂತರ ಅವರನ್ನು ಮುಂಬೈಗೆ ಕರೆಸಿಕೊಂಡರು.

ಪ್ರತಿಭಾನ್ವಿತರಾದ ವಾಸುದೇವರಾಯರು ಮುಂಬೈಯಲ್ಲಿ ಖ್ಯಾತ ಟಾಟಾ ಸ್ಟೀಲ್ ಕಂಪೆನಿಯಲ್ಲಿ ಉದ್ಯೋಗಿಯಾಗಿ ಆಯ್ಕೆಯಾಗಿ ತಮ್ಮ ಕರ್ತವ್ಯ ನಿಷ್ಠೆ ಮತ್ತು ಕಾರ್ಯದಕ್ಷತೆಯಿಂದ ಕಂಪೆನಿಯಲ್ಲಿ ಅಧಿಕಾರಿಯಾಗಿ ಬಡ್ತಿ ಹೊಂದಿದರು.

ಉದ್ಯೋಗಿಯಾಗಿದ್ದುಕೊಂಡೇ 'ಹೋಮಿಯೋಪತಿ' ವೈದ್ಯ ಶಾಸ್ತ್ರವನ್ನು ಅಧ್ಯಯನ ಮಾಡಿ ಅದನ್ನು ಕೈಗೂಡಿಸಿಕೊಂಡ ವಾಸುದೇವರಾಯರು ಮುಂಬೈಯ ಆಸುಪಾಸಿನಲ್ಲಿ ವೈದ್ಯಕೀಯ ಶುಶ್ರೂಷೆಯನ್ನು ಬಯಸಿ ಬರುವ ನಮ್ಮ ಸಮಾಜದ ಬಂಧುಗಳಿಗೆ ಮಾತ್ರವಲ್ಲದೆ ಇತರರಿಗೂ ಈ ಹೋಮಿಯೋಪತಿ ಔಷಧಗಳ ಉಚಿತ ಸೇವೆಯನ್ನು ಒದಗಿಸಿಕೊಡುತ್ತಿದ್ದರು. ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಊರಿಗೆ ಬಂದಾಗಲೂ ಊರಿನ ತನ್ನ ಬಂಧುಗಳಿಗೆ ಈ ಸೇವೆಯನ್ನು ಇತ್ತೀಚಿನವರೆಗೂ ಉಚಿತವಾಗಿ ಒದಗಿಸುತ್ತಿದ್ದು, ಮುಂಬೈಗೆ ಹೋಗಿ ಹೋಮಿಯೋಪತಿ ಔಷಧಿಗಳನ್ನು ಪಾರ್ಸೆಲ್‌ನಲ್ಲಿ ಕಳುಹಿಸಿಕೊಡುತ್ತಿದ್ದರು.

ಮುಂಬೈಯ ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ (ರಿ) ಇದರ ಸದಸ್ಯರಾಗಿ ಸುಮಾರು 15-20 ವರ್ಷಗಳ ಕಾಲ ವಿವಿಧ ಪದಾಧಿಕಾರಿಗಳಾಗಿ(ಕೋಶಾಧಿಕಾರಿ,ಕಾರ್ಯದರ್ಶಿ, ಉಪಾಧ್ಯಕ್ಷರಾಗಿ) ಕೊನೆಗೆ ಹಲವು ವರ್ಷ ಅಧ್ಯಕ್ಷರಾಗಿ ಈ ಶ್ರೀ ಸುಬ್ರಹ್ಮಣ್ಯ ಸೇವಾ ಸಂಘಕ್ಕೆ ಒಂದು ಭದ್ರ ಬುನಾದಿಯನ್ನು ಹಾಕುವಲ್ಲಿ ಉಳಿದ ಪದಾಧಿಕಾರಿಗಳೊಂದಿಗೆ ಕೈ ಜೋಡಿಸಿ ಸಂಘದ ಒಂದು ಆಧಾರ ಸ್ತಂಭವೆನಿಸಿದ್ದರು. ಇದಲ್ಲದೆ ಸಂಘಕ್ಕೆ ಬೇಕಾದ ಆರ್ಥಿಕ ಕ್ರೋಢೀಕರಣಗಳಂತಹ ಮಹತ್ವದ ಕೆಲಸದಲ್ಲಿಯೂ ಅತ್ಯಂತ ವ್ಯವಸ್ಥಿತ ಕಾರ್ಯಕ್ರಮಗಳನ್ನು ಕೈಗೊಂಡು ಈ ನಿಧಿಯ ಸದ್ಬಳಕೆಗಾಗಿ ಸಮಾಜದ ಅರ್ಹರಾದವರನ್ನು ಗುರುತಿಸಿ, ವಿದ್ಯಾರ್ಥಿ ವೇತನ, ಸಾಲ ವಿದ್ಯಾರ್ಥಿ ವೇತನ ಮೊದಲಾದುವುಗಳನ್ನು ಅವರ ಮನೆಗೇ ತಲುಪಿಸುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ.

ಕುಂದಾಪುರ ತಾಲೂಕು ಜಂಬೆಯ ಶ್ರೀಮತಿ ಸರಸ್ವತಿಯುವರನ್ನು ವಿವಾಹವಾಗಿದ್ದ ಇವರಿಬ್ಬರದೂ ಆದರ್ಶ ದಾಂಪತ್ಯ. ಊರಿನಲ್ಲಿರುವ ತಮ್ಮ ಬಂಧುಗಳೊಂದಿಗೆ ಉತ್ತಮ ಬಾಂಧವ್ಯವಿಟ್ಟುಕೊಂಡಿರುವ ಇವರು ತಮ್ಮ ಸಹೋದರಿಯರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆಯೂ ಚಿಂತನೆ ಮಾಡುತ್ತಿದ್ದರು.

ವಾಸುದೇವರಾವ್ -ಸರಸ್ವತಿ ದಂಪತಿಗಳಿಗೆ ಇಬ್ಬರು ಪುತ್ರರು. ಹಿರಿಯ ಪುತ್ರ ಶ್ರೀ ಶಿವಕುಮಾರ್ ಸಿವಿಲ್ ಇಂಜಿನಿಯರ್ ಆಗಿ ದುಬೈ- ಕತಾರ್‌ಗಳಲ್ಲಿ ಸೇವೆ ಸಲ್ಲಿಸಿ ಇದೀಗ ನಿವೃತ್ತರಾಗಿ ಮುಂಬೈಯಲ್ಲಿದ್ದಾರೆ. ಕುಡ್ವಿ ಸುಬ್ರಹ್ಮಣ್ಯರಾಯರ ಪುತ್ರಿ ಶ್ರೀಮತಿ ವಿದ್ಯಾರಾವ್ ಇವರ ಪತ್ನಿ. ಇನ್ನೋರ್ವ ಪುತ್ರ ಶ್ರೀ ಶರದ್‌ರಾವ್ ಸಿಬಿಐ (ಭಾರತ ಸರಕಾರದ ಸೇವೆ)ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸರಸ್ವತಿಯವರು 10 ತಿಂಗಳ ಹಿಂದೆ ನಿಧನರಾಗಿದ್ದು, ವಾಸುದೇವರಾಯರು ಇದೀಗ ತೆರೆಮರೆಗೆ ಸರಿದಿದ್ದಾರೆ. ನಮ್ಮೆಲ್ಲರ ಆದರ್ಶರಾಗಿದ್ದ ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ ಸಮಾಜದಲ್ಲಿ ಬೆಳ್ಳೆ ವಾಸುದೇವರಾಯರಂತವರು ಮತ್ತೆ ಹುಟ್ಟಿ ಬರಲಿ ಎಂದು ಹಾರೈಸೋಣ.

**- ಕೃಷ್ಣ ಕುಮಾರ್ ರಾವ್, ಮಟ್ಟು**

# ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರ ಸನ್ನಿಧಾನಕ್ಕೆ ಶಾಸ್ತ್ರ ನೈಪುಣ್ಯದ ಸಮರ್ಪಣೆ.

**-ಮೋಹನ್ ರಾವ್ ಚಿಟ್ಪಾಡಿ**

ಜುಲೈ 20 ಬೆಂಗಳೂರು ಚೆನ್ನೇನ ಹಳ್ಳಿಯಲ್ಲಿರುವ ವೇದ ವಿಜ್ಞಾನ ಗುರುಕುಲಕ್ಕೊಂದು ಅವಿಸ್ಮರಣೀಯ ಘಟನೆ. ಹಲವು ವರ್ಷಗಳ ನಿರೀಕ್ಷೆಯನ್ನು ಈಡೇರಿಸಿದ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಗುರು-ಶಿಷ್ಯರಿಬ್ಬರೂ ಗುರುಕುಲಕ್ಕೆ ವಿಜಯಂಗೈದು ಅಲ್ಲಿಯ ಯುವ ವಿದ್ವಾಂಸರನ್ನೂ, ಶಾಸ್ತ್ರಾಭ್ಯಾಸದಲ್ಲಿ ನಿರತರಾಗಿರುವ ಅರುವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನೂ ತಮ್ಮ ಕೃಪಾಕಟಾಕ್ಷದಿಂದ ಸಂತೃಪ್ತಗೊಳಿಸಿದರು.

ಕೇವಲ ಅರ್ಧಗಂಟೆಯ ಅವಧಿಯ ಕಾರ್ಯಕ್ರಮ ನಿಯೋಜಿಸತಕ್ಕದೆಂದು ಆಡಳಿತ ಮಂಡಳಿಯ ಪ್ರಮುಖರ ಸೂಚನೆಯಂತೆ ಕಾರ್ಯಕ್ರಮ ಯೋಜಿತಗೊಂಡಿದ್ದರೂ ಶ್ರೀ ಶ್ರೀ ದ್ವಯರು ಹಸನ್ಮುಖರಾಗಿಯೇ ಗುರುಕುಲದ ಆಗು ಹೋಗುಗಳನ್ನೆಲ್ಲಾ ವಿಚಾರಿಸಿ ಯುವ ವಿದ್ವಾಂಸರಿಗೆ ತಮ್ಮ ವೈದುಷ್ಯವನ್ನು ಪ್ರಸ್ತುತಗೊಳಿಸಲು ಅನುವು ನೀಡಿದರು. ವೇದಾಂತ, ವ್ಯಾಕರಣ, ಉಪಾಸನೆಯ ಬಗ್ಗೆ ಮೂವರು ಯುವ ವಿದ್ವಾಂಸರು ತಮ್ಮ ವಿಷಯ ಮಂಡಿಸಿದರು.

ವ್ಯಾಕರಣದಲ್ಲಿನ ಅಪವಾದ ಸ್ವರ್ಗದಲ್ಲಿನ ಒಂದು ವಿಷಯದ ಬಗ್ಗೆ ಹಾಗೂ ಆಧುನಿಕ ಗಣಿತ ವಿಜ್ಞಾನಕ್ಕೂ-ವ್ಯಾಕರಣಕ್ಕೂ ಇರುವ ಸಾಮ್ಯತೆಯ ಬಗ್ಗೆ-ಆಧುನಿಕ ಪರಿಭಾಷೆಯ ಮೂಲಕ (Power Point Programme) ಪ್ರಸ್ತುತ ಪಡಿಸಿದ ಡಾ| ತಿಲಕ್ ಎಮ್ ರಾವ್ ಸ್ವಾಮೀಜಿದ್ವಯರ ಗಮನ ಸೆಳೆದರು. ಇಪ್ಪತ್ತು ನಿಮಿಷಗಳ ಕಾಲ ನಡೆದ ಈ P.P.P.ಯನ್ನೂ ಹಾಗೂ ಅಸ್ಖಲಿತ ಸಂಸ್ಕೃತವಾಣಿಯಿಂದ ಸಂಪನ್ನಗೊಂಡ ಪ್ರತಿಭೆಯನ್ನೂ ತದೇಕ ಚಿತ್ತದಿಂದ ಗಮನಿಸಿದ ಶ್ರೀ ಶಾರದಾಪೀಠಾಧೀಶ್ವವರರು ಕೊನೆಯಲ್ಲಿ ಪ್ರಸನ್ನತೆಯನ್ನು ಮುಖದಲ್ಲೇ ವ್ಯಕ್ತಪಡಿಸುತ್ತಾ, ತಮ್ಮ ವಿಶೇಷ ಕೃಪಾಕಟಾಕ್ಷದಿಂದ ಆ ಯುವ ವಿದ್ವಾಂಸನನ್ನು ಆಶೀರ್ವದಿಸಿದರು.

ತಪೋನಿಷ್ಟರಾದ ಶ್ರೀದ್ವಯರ ಆಗಮನದಿಂದ ಗುರುಕುಲದ ತಪೋಭೂಮಿ ಪಾವನವಾಯಿತಲ್ಲದೇ ವಿದ್ವಾಂಸರಿಗೆ ಯುವೋತ್ಸಾಹವನ್ನು ತುಂಬಿಸಿತು.

ಡಾ| ತಿಲಕ್ ಎಮ್.ರಾವ್ ಇದಕ್ಕೂ ಮೊದಲು ಜೂನ್ 28ರಿಂದ ಜುಲೈ 2ರವರೆಗೆ ಥ್ಯಾಲೇಂಡ್‌ನ ಬ್ಯಾಂಕ್‌ನಲ್ಲಿ ನಡೆದಿದ್ದ 16ನೇ ವಿಶ್ವ ಸಂಸ್ಕೃತ ಸಮಾವೇಶದಲ್ಲಿ ಪಾಲ್ಗೊಂಡು ಪ್ರಬಂಧ ಮಂಡಿಸಿದ್ದರು ಹಾಗೂ ಐರ್ಲ್ಯಾಂಡಿನ ಸ್ಕೂಲ್ ಆಫ್ ಫಿಲಾಸಫಿ (School of Philosophy)ಯ ವಿಶೇಷ ಆಹ್ವಾನದ ಮೇರೆಗೆ ಕಳೆದ ಎಪ್ರಿಲ್ ತಿಂಗಳಲ್ಲಿ ಹತ್ತು ದಿನಗಳ ವಿಶೇಷ ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಿದ್ದಲ್ಲದೇ ಕೊನೆಯ ದಿನ ಡಬ್ಲಿನ್‌ನ ಜೋನ್ ಸ್ಕೋಟ್ಸ್ ಸ್ಕೂಲ್‌ನಲ್ಲಿ ನಡೆದ ಸಮಾರೋಪದಲ್ಲಿ ಭಾರತೀಯ ದರ್ಶನ ಶಾಸ್ತ್ರದ ಬಗ್ಗೆ ಉಪನ್ಯಾಸ ನೀಡಿದ್ದರು.

ಆಸ್ಟ್ರೇಲಿಯಾ, ಇಂಗ್ಲೇಂಡ್, ಐರ್ಲ್ಯಾಂಡ್, ಫ್ರಾನ್ಸ್‌ನ ತತ್ವಶಾಸ್ತ್ರಕ್ತರು ಇದರಲ್ಲಿ ಪಾಲ್ಗೊಂಡಿದ್ದರು.

ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551



ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಶ್ರೀ ಮಾತಾ ಜ್ಯೋತಿಷ್ಯಾಲಯ
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.
ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.
ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)


ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ
ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧಿ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.
ವೇದಮೂರ್ತಿ ಚಿದಾನಂದ ಭಟ್
#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್- 9886629697, 9986119865

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಕಲಿಸು ಗುರುವೇ ಕಲಿಸು

ರಚನೆ : ವೈ ಮೋಹನ್ ರಾವ್.

1952ರಲ್ಲಿ ರಾಧಾಕೃಷ್ಣನ್‌ರವರು ಭಾರತದ ಉಪರಾಷ್ಟ್ರಪತಿಯಾದರು. 1962ರಲ್ಲಿ ರಾಷ್ಟ್ರಪತಿಯಾದರು. 1962ರಿಂದ ಭಾರತಾದ್ಯಂತ ಪ್ರತಿವರ್ಷ ಸಪ್ಟೆಂಬರ್ 5ನ್ನು ಶಿಕ್ಷಕರ ದಿನವನ್ನಾಗಿ ಆಚರಿಸುತ್ತಾರೆ. ಡಾ। ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಧಾಕೃಷ್ಣನ್‌ರವರು ಹೇಳಿದಂತೆ "ನನ್ನ ಜನ್ಮದಿನದ ಆಚರಣೆಯನ್ನು ಶಿಕ್ಷಕರಿಗೆ ಅರ್ಪಿಸುತ್ತೇನೆ. ಆ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಬೇಕು" ರಾಧಾಕೃಷ್ಣನ್‌ರವರು ಶಿಕ್ಷಕರ ಬಗ್ಗೆ ತುಂಬಾ ಅಭಿಮಾನವನ್ನು ಹೀಗೆ ವ್ಯಕ್ತಪಡಿಸಿರುವರು. ಭವಿಷ್ಯತ್ತಿನ ವಿಶ್ವಾಸಕ್ಕೆ ಬದ್ಧರಾಗಿರುವವರು ಶಿಕ್ಷಕರು. ಮಾನವ ಜನಾಂಗದ ಭವಿಷ್ಯವನ್ನು ರೂಪಿಸುವವರು. ಸನ್ನಡತೆಗೆ ದಾರಿ ತೋರಿಸುವವರು. ಆದ್ದರಿಂದ ರಾಧಾಕೃಷ್ಣನ್‌ರವರು ತಮ್ಮ ಜನ್ಮದಿನವನ್ನು 'ಶಿಕ್ಷಕರ ದಿನ' ಎಂದು ಕರೆದರು. ಇದರಿಂದ ಸಮಾಜವು ಶಿಕ್ಷಕ ಸಮುದಾಯಕ್ಕೆ ಗೌರವ ಸಲ್ಲಿಸುವ ಅವಕಾಶವನ್ನು ಒದಗಿಸಿದರು.

ಆದ್ದರಿಂದಲೇ ಸಪ್ಟೆಂಬರ್ 5 ಶಾಲಾ ದಿನಗಳಲ್ಲಿ "ಟೀಚರ್ಸ್ ಡೇ" ಎಂದು ಆಚರಿಸುವುದು. ಆ ದಿನದ ವಿದ್ಯಾರ್ಥಿಗಳ ಸಂತೋಷವನ್ನು ಹೇಗೆಂದು ವರ್ಣಿಸಲಿ? ಆ ದಿನ ಶಿಕ್ಷಕರನ್ನು ಕಂಡಕೂಡಲೇ 'ಹೆಪ್ಪಿ ಟೀಚರ್ಸ್ ಡೇ' ಎಂದು ಗೌರವದಿಂದ ಸಂಬೋಧಿಸುತ್ತಾರೆ. ಹೂಗಳಲ್ಲಿ ಭಗವಂತ ಜಾಗರೂಕ ಸ್ಥಿತಿಯಲ್ಲಿ ಇರುತ್ತಾನೆ ಎಂದು ಹೇಳುತ್ತಾರೆ. ಆದ್ದರಿಂದ ಬಣ್ಣಬಣ್ಣದ ಗುಲಾಬಿ ಹೂಗಳನ್ನು ಶಿಕ್ಷಕವೃಂದಕ್ಕೆ ಪ್ರೀತಿಯಿಂದ ನೀಡುತ್ತಾರೆ. ಆ ದಿನ ಗುಲಾಬಿ ಹೂಗಳ ದರ ತುಂಬಾ ಏರಿರುತ್ತದೆ. ಆದರೆ ಆ ಹೂಗಳಲ್ಲಿರುವ ಪ್ರೀತಿಯನ್ನು ಯಾರೂ ಲೆಕ್ಕ ಮಾಡಲು ಸಾಧ್ಯವಿಲ್ಲ. ಇನ್ನು ಕೆಲವರು ಶುಭಾಶಯ ಪತ್ರಗಳನ್ನು ಶಿಕ್ಷಕರಿಗೆ ನೀಡುತ್ತಾರೆ. ಶಿಕ್ಷಕ ದಿನಾಚರಣೆ ಸಂದರ್ಭಕ್ಕೆಂದೇ ತಯಾರಿಸಲ್ಪಟ್ಟ ವಿವಿಧ ನಮೂನೆಯ, ಚಿತ್ರ ವಿನ್ಯಾಸಗಳ ಮತ್ತು ಚಿತ್ತಾಕರ್ಷಕ ಸಂದೇಶಗಳ ಗ್ರೀಟಿಂಗ್ಸ್ ಕಾರ್ಡ್ಸ್‌ಗಳು ಶಿಕ್ಷಕರ ಸೇವೆಯ ಉಪಕಾರ ಸ್ಮರಣೆಯನ್ನು ಸಂಕೇತಿಸುತ್ತವೆ. ಈ ಶುಭಾಶಯ ಪತ್ರಗಳನ್ನು ಗುರುಗಳಿಗೆ ಸಮರ್ಪಿಸಿದಾಗ ನಿಜವಾಗಿಯೂ ಸಾರ್ಥಕ್ಯದ ಭಾವನೆ ಸೃಷ್ಟಿಯಾಗುತ್ತದೆ. ಗುರು ಮಹಿಮೆಯ ಹಿರಿಮೆಯನ್ನು ಗೌರವ ಶುಭಾಶಯ ಪತ್ರವೊಂದು ಹೀಗೆ ಹೇಳುತ್ತದೆ.

Teachers are to students
What sunshine is to flowers
Thank you dear teacher

ಅಬ್ರಹಾಂ ಲಿಂಕನ್ ತನ್ನ ಮಗನನ್ನು ಗುರುವಿನ ಸನ್ನಿಧಿಗೆ ಹಾಕುವಾಗ ರಚಿಸಿದ ಪತ್ರವನ್ನು ರಾಮನಾಥ್ ಎಂಬುವರು ಕನ್ನಡಕ್ಕೆ ಭಾವಾನುವಾದ ಮಾಡಿದ್ದಾರೆ. "ಕಲಿಸು ಗುರುವೆ" ಎಂಬ ಹಾಡನ್ನು ಹಾಡುವಾಗ ಹೃದಯವಂತರು ತೇವಗೊಳ್ಳುತ್ತಾರೆ. ಒಳ್ಳೆಯ ರಾಗ ಮತ್ತು ತಾಳದಲ್ಲಿ ರಾಜು ಅನಂತಸ್ವಾಮಿ ಮತ್ತು ರಂಗಾಯಣದ ಚೀನಿ ಈ ಕವನಕ್ಕೊಂದು ರಾಗ ಸಂಯೋಜನೆಯನ್ನು ಮಾಡಿದ್ದಾರೆ. ಈ ಕವಿತೆಯನ್ನು ಬರೆದಿಟ್ಟುಕೊಂಡು ಶಾಲೆಗಳಲ್ಲಿ, ಗುಂಪುಗಳಲ್ಲಿ ಮತ್ತು ಸಮಾರಂಭಗಳಲ್ಲಿ ಹಾಡಬೇಕೆಂದು ಹಾಡಿಸಬೇಕೆಂದು ನಾಗತಿ ಚಂದ್ರಶೇಖರ್ ಅವರು ಒಂದು ಲೇಖನದಲ್ಲಿ ಕೇಳಿಕೊಂಡಿರುತ್ತಾರೆ. ಕವನದ ಸಾಲುಗಳು....

ಕಲಿಸು ಗುರುವೇ ಕಲಿಸು
ಕಲಿಸು ನೀ ಸದ್ಗುರುವೇ ಕಲಿಸು
ಸುಳ್ಳಿನ ನಡುವೆ ಸತ್ಯವನಾಡಲು ಕಲಿಸು
ಸ್ವಾರ್ಥದ ನಡುವೆ ನಿಸ್ವಾರ್ಥಿಯಾಗಲು ಕಲಿಸು
ಅಂಜಿ ನಡೆವರ ನಡುವೆ ಧೀರನಾಗಲು ಕಲಿಸು
ಧರೆಯ ದುಷ್ಟರ ನಡುವೆ ಜಾಣನಾಗಲು ಕಲಿಸು
ಜಾಣನಾಗಲು ಕಲಿಸು ನಾ ಜಾಣನಾಗಲು ಕಲಿಸು
ಬೆವರಿಳಿಸಿ ಗಳಿಸಿದಾ ಒಂದು ಕಾಸು
ಸಿಕ್ಕ ಹತ್ತಕ್ಕಿಂತ ಮಿಗಿಲೆಂಬುದು ಕಲಿಸು
ಸೋಲುಗೆಲುವಿನಲಿ ಸಮಚಿತ್ತದಿಂದಿರಲು
ಶತ್ರುಗಳಿಗೂ ಸನ್ಮಿತ್ರನಾಗಿರಲು ಕಲಿಸು
ಹಸಿರು ಮಲೆ ಹೂವಲಿ ನಾ ಧ್ಯಾನಿಸುವದ ಕಲಿಸು
ಜಾಣನಾಗಲು ಕಲಿಸು ನಾ ಜಾಣನಾಗಲು ಕಲಿಸು
ಜಗವೆಲ್ಲಾ ಒಂದಾಗಿ ಜರಿದರೂ ಸರಿಯೆ
ನನ್ನನೆ ನಾ ನಂಬುವ ಬಗೆ ಕಲಿಸು
ಅಳುವಿನಲಿ ಅವಮಾನ ಇಲ್ಲೆಂಬುದ ನೀ ಕಲಿಸು
ನನ್ನನೆ ನಾ ನೋಡಿ ನಗುವುದನು ಕಲಿಸು
ಮಾನವೀಯತೆಯಲಿ ನಾ ಮರೆಯುವುದನು ಕಲಿಸು
ಮಾನವೀಯತೆಯಲಿ ನಾ ಕರಗುವುದನು ಕಲಿಸು
ಜಾಣನಾಗಲು ಕಲಿಸು ನಾ ಜಾಣನಾಗಲು ಕಲಿಸು

ಅಬ್ರಹಾಂ ಲಿಂಕನ್ ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾಗಿದ್ದವರು. ತನ್ನ ಮಗ ಓದುತ್ತಿದ್ದ ಶಾಲೆಯ ಶಿಕ್ಷಕರಿಗೊಂದು ಪತ್ರ ಬರೆದ ಆ ಪತ್ರ ಇಂದಿನ ಶಿಕ್ಷಕ ವೃಂದಕ್ಕೆ ಮತ್ತು ತಂದೆ-ತಾಯಿಯರಿಗೆ ಉತ್ತಮ ಮೌಲ್ಯಗಳನ್ನು ತೋರಿಸುವ ದಾರಿದೀಪ. ಆ ಪತ್ರದಲ್ಲಿ ಲಿಂಕನ್ ಇನ್ನೊಂದು ಮೌಲ್ಯವನ್ನು ಪ್ರತಿಪಾದಿಸಿದ್ದ. ಎಲ್ಲಾ ಮನುಷ್ಯರು ನ್ಯಾಯನಿಷ್ಠರಲ್ಲ. ಎಲ್ಲಾ ಮನುಷ್ಯರು ಸತ್ಯಸಂಧರಲ್ಲ. ಆದರೆ ಒಬ್ಬ ಕುತಂತ್ರಿ, ಕೇಡಿಗೇಡಿ ಇದ್ದ ಕಡೆಯಲ್ಲೇ ಒಬ್ಬ ನಾಯಕ ಇರುತ್ತಾನೆ. ಒಬ್ಬ ಭ್ರಷ್ಟ ರಾಜಕಾರಣಿ ಇದ್ದರೆ, ಅಲ್ಲಿಯೇ ಒಬ್ಬ ಪ್ರಜಾನಾಯಕ ಇರುತ್ತಾನೆ ಎನ್ನುವುದನ್ನು ತಿಳಿಸಿ ಒಬ್ಬ ಶತ್ರು ಇದ್ದರೆ ಒಬ್ಬ ಮಿತ್ರ ಇರುತ್ತಾನೆ. ಇವೆಲ್ಲವನ್ನು ಒಂದೇ ಸಾರಿ ತಿಳಿಸಬೇಕಾಗಿಲ್ಲ ಆದರೆ ನಿಧಾನವಾಗಿಯಾದರೂ ತಿಳಿಸಿ.

ಸರ್ವಪಲ್ಲಿ ರಾಧಾಕೃಷ್ಣನ್ ಮಹಾನ್ ತತ್ವಜ್ಞಾನಿ ಮತ್ತು ದಾರ್ಶನಿಕ. ಅವರ ಅನಂತರ ಭಾರತದ ಪತಾಕೆಯನ್ನು ಅಂತಾರಾಷ್ಟ್ರೀಯ ದಿಗಂತದಲ್ಲಿ ಅತಿ ಎತ್ತರದಲ್ಲಿ ಎತ್ತಿ ಹಿಡಿದ ಇನ್ನೊರ್ವ ರಾಷ್ಟ್ರಪತಿ ಎಂದರೆ ಪ್ರಾಯ: ಅಬ್ದುಲ್ ಕಲಾಂ ಒಬ್ಬರೇ ಎಂದು ಹೇಳುವುದು ಅಕ್ಷರಶ: ಸತ್ಯ. ಅವರು ಮಕ್ಕಳನ್ನು ಮತ್ತು ಯುವಕರನ್ನು ನೇರವಾಗಿ ಸಂಪರ್ಕಿಸಿ ಬಲಿಷ್ಠ ಭಾರತದ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡಿದವರು. ತಮಗೆ ಅತ್ಯಂತ ಪ್ರಿಯವಾದ ಕೆಲಸ-ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಲೇ ಕೊನೆಯುಸಿರೆಳೆದರು, ಐ.ಐ.ಎಂ.ನಲ್ಲಿ ಉಪನ್ಯಾಸ ನೀಡುತ್ತಲೇ ಕುಸಿದು ಬಿದ್ದು ವಿಧಿವಶರಾದರು. ವಿಜ್ಞಾನಿ, ತಂತ್ರಜ್ಞಾನಿ, ವೈಜ್ಞಾನಿಕ ಆಡಳಿತಗಾರ, ಭಾರತದ ಕ್ಷಿಪಣಿ ಪಿತಾಮಹ, ಅಣುಬಾಂಬಿನ ಅಧ್ವರ್ಯ ಯುವಕರ ಕಣ್ಮಣಿ ಭಾರತ ರತ್ನ ಅಬ್ದುಲ್ ಕಲಾಂ ಅವರ ವೈವಿಧ್ಯಮಯ ಬದುಕು ವಿಶ್ವಕ್ಕೆ ದಾರಿದೀಪ.

## ನಿಧನ

### ಶ್ರೀಮತಿ ರಮಾದೇವಿ

ಮೂಡು ಅಲೆವೂರು ಶ್ರೀನಿವಾಸ ರಾವ್ ಇವರ ಧರ್ಮಪತ್ನಿ ಶ್ರೀಮತಿ ರಮಾದೇವಿಯವರು ಅಲ್ಪ ಕಾಲದ ಅಸೌಖ್ಯದಿಂದ ತಾ.23-08-2015 ರಂದು ಪೂನಾದಲ್ಲಿ ನಿಧನಹೊಂದಿದರು.

### ಶ್ರೀಮತಿ ಜಯಲಕ್ಷ್ಮಿ

ಕುಕ್ಕಿಕಟ್ಟೆ ಕಲ್ಯಾಣನಗರದ ಶ್ರೀ ಸರ್ವಜ್ಞಶರ್ಮರ ಧರ್ಮಪತ್ನಿ, ನಿವೃತ್ತ ಶಿಕ್ಷಕಿ ಶ್ರೀಮತಿ ಜಯಲಕ್ಷ್ಮಿಯವರು ಅಲ್ಪಕಾಲದ ಅಸೌಖ್ಯದಿಂದ ತಾ.01-08-2015ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು.

### ಶ್ರೀಮತಿ ಗಂಗಾದೇವಿ

ಉಡುಪಿ ಬೈಲೂರು ಮಹಿಷಮರ್ದಿನಿ ದೇವಸ್ಥಾನದ ಬಳಿಯ ನಿವಾಸಿ ಶ್ರೀಮತಿ ಗಂಗಾದೇವಿ (ಶ್ರೀ ರಾಮಕೃಷ್ಣ ಹೆಬ್ಬಾರ್‌ರವರ ಧರ್ಮಪತ್ನಿ) ತಾ.15-08-2015ರಂದು ಬೈಲೂರಿನ ಸ್ವಗೃಹದಲ್ಲಿ ನಿಧನಹೊಂದಿದರು.

## ನಾಮಕರಣ

ನಮ್ಮ ಸಮಾಜದ ಪ್ರಸಿದ್ಧ ಭಾಗವತರಾದ ಶ್ರೀ ಚಂದ್ರಕಾಂತ ರಾವ್ (ಮೂಡುಬೆಳ್ಳೆ ಶ್ರೀ ವೆಂಕಟರಮಣ ರಾವ್ ಹಾಗೂ ಮೋಹಿನಿ ರಾವ್‌ರವರ ಪುತ್ರ) ಹಾಗೂ ಶ್ರೀಮತಿ ದೀಪಿಕಾ (ಹೊಸ್ಕೋಟೆ ಶ್ರೀ ಆನಂದರಾವ್ ಮತ್ತು ವಿಜಯಲಕ್ಷ್ಮೀರವರ ಪುತ್ರಿ) ದಂಪತಿಗಳು ತಮ್ಮ ಪುತ್ರಿ ಅನುಶ್ರೀಯ ನಾಮಕರಣವನ್ನು ಕುಂದಾಪುರ ನಾಯ್ಕನಕಟ್ಟೆಯ ಹೊಸ್ಕೋಟೆಯಲ್ಲಿ ತಾ.23-08-2015ರ ರವಿವಾರದಂದು ನೆರವೇರಿಸಿದರು.

## ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ

ಕಾರ್ಕಳ ತಾಲೂಕಿನ ನಂದಳಿಕೆ ಶ್ರೀ ಮಹಾಲಿಂಗೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶ್ರೀ ವೆಂಕಟಕೃಷ್ಣ ರಾವ್ 2015ನೇ ಸಾಲಿನ ಶಿಕ್ಷಕರ ರಾಜ್ಯ ಪ್ರಶಸ್ತಿಯಿಂದ ಪುರಸ್ಕೃತರಾಗಿದ್ದಾರೆ. ಇವರು 2005ರಿಂದ ಈ ಶಾಲೆಯ ಮುಖ್ಯಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಉಡುಪಿ ಜಿಲ್ಲಾ ಅನುದಾನಿತ ಶಾಲಾ ಶಿಕ್ಷಕ ಸಂಘದ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಪ್ಟೆಂಬರ್ 5ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರ ಸಮ್ಮುಖ ಈ ಪ್ರಶಸ್ತಿ ಪ್ರದಾನ ನಡೆಯಿತು. ಶ್ರೀಯುತರು ನಂದಳಿಕೆ ರಾಮರಾವ್ ವಿ.ಎಸ್. ಹಾಗೂ ಗುಲಾಬಿಯಮ್ಮರವರ ಪುತ್ರ

## ವಿಳಾಸ ಬದಲಾವಣೆ

**ಕೆ.ಹೆಚ್.ರವಿಕುಮಾರ್**, ಮೃದಂಗ ವಿದ್ವಾನ್, 301, "ಸರಸ್ವತಿ ಚಂದ್ರ"
ಭಾರ್ಗವಿ ಗ್ಲೋರಿಯಾ ರೆಸಿಡೆನ್ಸಿ, ಬಾರೆಬೈಲು, ಗ್ಲೋಬಲ್ ಕೋರ್ಟ್ ಅಪಾರ್ಟ್‌ಮೆಂಟ್
ಹಿಂಭಾಗ, ಕುಂಟಿಕಾನ, ಮಂಗಳೂರು-575004. ಮೊಬೈಲ್ : 9343572424, 9448892439


## ನಾಯಕತ್ವ ಮತ್ತು ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರ

ಉಡುಪಿ ನೆಹರು ಯುವ ಕೇಂದ್ರ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಮಂಗಳೂರು ವಿಶ್ವವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ತಾ.21-08-2015ರಂದು ಎಸ್.ಎಮ್.ಎಸ್. ಕಾಲೇಜು ಬ್ರಹ್ಮಾವರದಲ್ಲಿ ನಡೆದ "ನಾಯಕತ್ವ ಮತ್ತು ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರ"ದಲ್ಲಿ ನಮ್ಮ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ವೈ.ರವೀಂದ್ರನಾಥ ರಾವ್ ಅಧ್ಯಕ್ಷತೆ ವಹಿಸಿದ್ದರು.


## ಅರಿತೋಡು ಜನಾರ್ದನ ಸುಬ್ರಹ್ಮಣ್ಯ ದೇವಸ್ಥಾನ ಪುತ್ತೂರು-ಉಡುಪಿ

ತಾ.16-08-2015 ಆದಿತ್ಯವಾರ ಈ ದೇವಸ್ಥಾನದಲ್ಲಿ ಉಡುಪಿ-ಪುತ್ತೂರು ಬ್ರಾಹ್ಮಣ ವಲಯ ವತಿಯಿಂದ ಉದಯಾಸ್ತಮಾನ 'ವಿಷ್ಣು ಸಹಸ್ರನಾಮ ಪಾರಾಯಣ' ಹಾಗೂ 'ಲಕ್ಷ್ಮೀ ಶೋಭಾನೆ' ಸಹಿತ ಲಕ್ಷ ತುಳಸಿ ಅರ್ಚನೆಯಲ್ಲಿ ನಮ್ಮ ಸಂಘದ ಸ್ವಾಧ್ಯಾಯ ತಂಡದ ಸದಸ್ಯರು ಪಾಲ್ಗೊಂಡರು. ಪಾರಾಯಣದ ನಂತರ, ದೇವರ ಪ್ರಸಾದ ವಿತರಿಸಿ ಸದಸ್ಯರನ್ನು ಶಾಲುಹೊದಿಸಿ ಗೌರವಿಸಿದರು.

ವರದಿ : ಜಿ.ಕೆ.ಕೋಲ್ಪೆ

ಪ್ರೊ : ಸುಧಾಕರ್ ರಾವ್ ಬೆಳ್ಳೆ

ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

Krishna Rao
Ph : 2520652
Mob. : 9902029048
KISHAN

Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

Buying and selling shares
as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
Visit : www.sharekhan.com

# ಅಮೇರಿಕದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿ

– ಡಾ। ಎಚ್.ವಿ. ನರಸಿಂಹ ಮೂರ್ತಿ, ಕುಂದಾಪುರ

ಜಗತ್ತಿನ ಶ್ರೀಮಂತ ದೇಶವಾದ ಅಮೇರಿಕಕ್ಕೆ ಇದು ನನ್ನ ಎರಡನೆಯ ಸಂದರ್ಶನ. 1980ರಲ್ಲಿ ಅಂತಾರಾಷ್ಟ್ರೀಯ ರೋಟರಿಯ ಸಮೂಹ ಅಧ್ಯಯನ ವಿನಿಮಯ ತಂಡದ ಐದು ಮಂದಿ ಸದಸ್ಯರಲ್ಲಿ ಒಬ್ಬನಾಗಿ ಆಯ್ಕೆಗೊಂಡು, ರೋಟರಿ ಆತಿಥ್ಯದಲ್ಲಿ ಪ್ರವಾಸ ಮಾಡಿದ ಅಪೂರ್ವ ನೆನಪುಗಳು ಇನ್ನೂ ಹಸಿರಾಗಿಯೇ ಉಳಿದಿವೆ. ಇದೀಗ ಅಮೇರಿಕದ ಸಾಫ್ಟ್‌ವೇರ್ ಕಂಪೆನಿಯೊಂದರಲ್ಲಿ ಉದ್ಯೋಗಸ್ಥನಾದ ನನ್ನ ಮಗ ಚಿ। ವಿಕಾಸ್, ಸೊಸೆ ಚಿ। ಸೌ। ಶ್ರುತಿ ಮತ್ತು ಮೊಮ್ಮಗಳು ಚಿ। ಗೌರಿಯನ್ನು ನೋಡಲು ನನ್ನ ಧರ್ಮಪತ್ನಿ ಸೌ। ಗೀತಾಳೊಂದಿಗೆ ಪ್ರವಾಸ ಮಾಡುವ ಅವಕಾಶ ಒದಗಿ ಬಂತು. ಭಾರತ ಮತ್ತು ಹಿಂದೂ ಧರ್ಮದ ಶಕ್ತಿಯನ್ನು ಅಮೇರಿಕಾದ ನೆಲದಲ್ಲಿ ನಿಂತು ಜಗತ್ತಿಗೇ ಮನದಟ್ಟು ಮಾಡಿಕೊಟ್ಟ ಸ್ವಾಮಿ ವಿವೇಕಾನಂದರ ಅಂದಿನ ಪ್ರಯತ್ನ ಇಂದು ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ ಎಂಬುದನ್ನು ತಿಳಿಯಲು ನನ್ನ ಈ ಪ್ರವಾಸ ಅನುಕೂಲಕರವಾಗಿ ಪರಿಣಮಿಸಿತು.

**ಅಮೇರಿಕದಲ್ಲಿ ಹಿಂದುಗಳು**

ಜಗತ್ತಿನ ಸಂಪದ್ಭರಿತ ರಾಷ್ಟ್ರವಾದ ಅಮೇರಿಕದ ಒಟ್ಟು ಜನಸಂಖ್ಯೆ 32.48 ಕೋಟಿಯಾದರೆ, ಅದರಲ್ಲಿ ಹಿಂದುಗಳ ಒಟ್ಟು ಸಂಖ್ಯೆ 22 ಲಕ್ಷವಂತೆ. ಇನ್ನುಳಿದವರು ಕ್ರೈಸ್ತ, ಯಹೂದಿ, ಇಸ್ಲಾಂ ಮತ್ತು ಇತರ ಜನರು. ಅಮೇರಿಕದ ಪಿನ್ ಸಂಶೋಧನ ಕೇಂದ್ರ 'ರಿಲಿಜಿಯಸ್ ಲ್ಯಾಂಡ್‌ಸ್ಕೇಪ್ ಸ್ಟಡಿ' ಎಂಬ ಅಧ್ಯಯನ ವರದಿಯನ್ನು ಸಿದ್ಧಪಡಿಸಿದ್ದು, ಅದರ ಪ್ರಕಾರ ಅಮೇರಿಕದಲ್ಲಿ ಕ್ರೈಸ್ತ, ಯಹೂದಿ ಮತ್ತು ಇಸ್ಲಾಂ ನಂತರ ಹಿಂದು ನಾಲ್ಕನೆಯ ದೊಡ್ಡ ಧರ್ಮವಾಗಿ ಗುರುತಿಸಲ್ಪಟ್ಟಿದೆ. 'ಅಮೇರಿಕದ ಒಟ್ಟು ಜನಸಂಖ್ಯೆಯ ಶೇಕಡ 8 ರಷ್ಟು ಹಿಂದುಗಳು' ñ ಎಂದು ಈ ಅಧ್ಯಯನ ವರದಿ ತಿಳಿಸಿದೆ.

ಪರಕೀಯವಾದ ಈ ನೆಲದಲ್ಲಿ ಹಿಂದುಗಳ ಸಂಖ್ಯೆ ಇಷ್ಟೊಂದು ಹೆಚ್ಚಲು ಮುಖ್ಯ ಕಾರಣ ಭಾರತದಿಂದ ನಿರಂತರವಾಗಿ ನಡೆಯುತ್ತಿರುವ ವಲಸೆ. ಅಮೆರಿಕದ ಹಿಂದುಗಳಲ್ಲಿ ಶೇ.87ರಷ್ಟು ವಲಸಿಗರಾಗಿದ್ದರೆ, ಮತ್ತುಳಿದ ಶೇ.13ರಷ್ಟು ವಿವಿಧ ಧರ್ಮಗಳಿಂದ ಹಿಂದೂ ಧರ್ಮಕ್ಕೆ ಮತಾಂತರಗೊಂಡವರು. ಈ ಮತಾಂತರ ಪ್ರಕ್ರಿಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ಹಿಂದುಗಳಲ್ಲೂ ಶೇ.1 ರಷ್ಟು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ.

ಹಿಂದುಗಳ ವಲಸೆಗೆ ಪ್ರಮುಖ ಕಾರಣಗಳೆಂದರೆ ಉದ್ಯೋಗ ಭದ್ರತೆ ಉತ್ತಮ ಆದಾಯ, ಸಾಮಾಜಿಕ ಸುರಕ್ಷತೆ ಮತ್ತು ವಿಪುಲವಾದ ಅವಕಾಶಗಳು. ಎಂಜಿನಿಯರಿಂಗ್, ವೈದ್ಯಕೀಯ, ಸಿ.ಎ ಮತ್ತು ಎಂ.ಬಿ.ಎ. ಪದವಿ ವ್ಯಾಸಂಗವನ್ನು ಪೂರ್ಣಗೊಳಿಸಿದ ಹಿಂದು ಯುವಕ-ಯುವತಿಯರ ಸಂಖ್ಯೆ ಇಲ್ಲಿ ಹೆಚ್ಚಿನದು. ಇತ್ತೀಚಿನ ವರ್ಷಗಳಲ್ಲಿ ಭಾರತದ ಅನೇಕ ಸಾಫ್ಟ್‌ವೇರ್ ಕಂಪೆನಿಗಳು ತಮ್ಮ ಉದ್ಯೋಗಿಗಳನ್ನು ಅಮೇರಿಕದಲ್ಲಿರುವ ತಮ್ಮ ಗ್ರಾಹಕರ ಸೇವೆಗಾಗಿ ಕಳುಹಿಸುತ್ತವೆ. ಹೀಗೆ ಹೋದ ಉದ್ಯೋಗಿಗಳು ಕ್ರಮೇಣ ಅಲ್ಲಿಯ ಗ್ರೀನ್‌ಕಾರ್ಡ್ ಪಡೆದು, ಅಲ್ಲಿಯೇ ಶಾಶ್ವತವಾಗಿ ನೆಲಸುತ್ತಾರೆ. ಅಮೆರಿಕದ ಪ್ರಜೆಗಳ ಸಂಖ್ಯೆಯಲ್ಲಿ ವಿಲೀನಗೊಳ್ಳುವ ಈ ಹಿಂದುಗಳ ಸ್ಥಾನ-ಮಾನಗಳು ಹಂತ-ಹಂತವಾಗಿ ಮೇಲಕ್ಕೇರುತ್ತವೆ. ಇವರಲ್ಲಿ ಅನೇಕ ಮಂದಿ ಆಯಕಟ್ಟಿನ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ತಮ್ಮ ನಿರಂತರ ಶ್ರಮ ಮತ್ತು ಸಾಧನೆಗಳ ಮೂಲಕ ಅಲ್ಲಿನ ಆಡಳಿತ ವರ್ಗದವರನ್ನು ನಿಬ್ಬೆರಗುಗೊಳಿಸುತ್ತಿದ್ದಾರೆ. ಶೇ.36ರಷ್ಟು ಹಿಂದುಗಳು ಒಂದುವರೆ ಲಕ್ಷ ಡಾಲರ್‌ಗಳಿಗೂ ಹೆಚ್ಚಿನ ವಾರ್ಷಿಕ ಆದಾಯವನ್ನು ಹೊಂದಿದ್ದಾರೆ. ಆದ್ದರಿಂದ ಭಾರತೀಯ ಹಿಂದುಗಳು ಬುದ್ಧಿವಂತರು, ಶ್ರಮಜೀವಿಗಳು, ವಹಿಸಿದ ಕೆಲಸಗಳನ್ನು ಶ್ರದ್ಧೆಯಿಂದ ಮಾಡುವವರು- ಎಂಬ ವಿಶ್ವಾಸ ಅಮೆರಿಕನ್ನರದು.

ಓದಿನಲ್ಲೂ ಹಿಂದುಗಳೇ ಮುಂದಿದ್ದಾರೆ ರಾಷ್ಟ್ರಾಧ್ಯಕ್ಷ ಒಬಾಮಾ ಅವರು ಹಲವು ವಿದ್ಯಾರ್ಥಿ ವೇದಿಕೆಗಳಲ್ಲಿ 'ಗಣಿತ ಮತ್ತು ವಿಜ್ಞಾನವನ್ನು ಚೆನ್ನಾಗಿ ಕಲಿಯಿರಿ ಇಲ್ಲದಿದ್ದರೆ ನಿಮ್ಮ ಉದ್ಯೋಗಗಳು ಭಾರತೀಯರ ಪಾಲಾಗುತ್ತವೆ'- ಎಂದು ಎಚ್ಚರಿಸುತ್ತಿರುವುದು ಇದಕ್ಕೊಂದು ನಿದರ್ಶನ. ಅಮೆರಿಕದ ವಿವಿಧ ಶಾಲೆ-ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕೂಡ ಹಿಂದು ಶಿಕ್ಷಕರು ಮತ್ತು ಉಪನ್ಯಾಸಕರ ನೇಮಕಾತಿ ಹೆಚ್ಚುತ್ತಿದೆ. ಮುಖ್ಯವಾಗಿ ಗಣಿತ ಹಾಗೂ ವಿಜ್ಞಾನ ಬೋಧನೆಗೆ ಇವರ ನೇಮಕಾತಿ ನಡೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ರಂಗದಲ್ಲಿ ಕೆಲಮಂದಿ ಹಿಂದುಗಳು ಮಿಂಚುತ್ತಿದ್ದಾರೆ. ಒಬಾಮಾ ಸರಕಾರದಲ್ಲಿ ಮಹತ್ತ್ವದ ಸ್ಥಾನಗಳನ್ನು ಪಡೆಯುವ ಸದವಕಾಶವೂ ಕೆಲಮಂದಿ ಹಿಂದುಗಳಿಗೆ ಲಭಿಸಿರುವುದು ಸಂತಸದ ಸಂಗತಿ.

**ಹಿಂದೂ ಧರ್ಮದತ್ತ ಒಲವು**

ಶೇ.26ರಷ್ಟು ಅಮೆರಿಕನ್ನರು ಹಿಂದು ಧರ್ಮದತ್ತ ಅಪಾರ ಒಲವು ಹೊಂದಿದವರು. 'ದೇಹನಶ್ವರ; ಆತ್ಮಶಾಶ್ವತ', 'ಜೀವೋ ಬ್ರಹ್ಮೈವ ನಾऽಪರಃ', 'ಪುನರ್ಜನ್ಮ ಮೊದಲಾದ ಸಿದ್ಧಾಂತಗಳಲ್ಲಿ ಅಪಾರ ನಂಬಿಕೆ ದಿನದಿಂದ ದಿನಕ್ಕೆ ದೃಢಗೊಳ್ಳುತ್ತಿದೆ. ಹಿಂದು ಹಬ್ಬ-ಹರಿದಿನಗಳ ಬಗೆಗೆ ಪ್ರಾಧ್ಯಾನ್ಯ ನೀಡಲಾಗುತ್ತಿದೆ. ಕಳೆದ ವರ್ಷ ಹಿಂದುಗಳ ಜತೆ ದೀಪಾವಳಿಯನ್ನು ಆಚರಿಸಿದ್ದ ಅಧ್ಯಕ್ಷ ಒಬಾಮಾ ಈ ಶುಭ ಸಂದರ್ಭದಲ್ಲಿ ಸಂದೇಶವನ್ನೂ ನೀಡಿದ್ದರು. ಶ್ವೇತಭವನದಲ್ಲಿ ಕೂಡ ದೀಪಾವಳಿಯನ್ನು ಆಚರಿಸಲಾಗಿತ್ತು. ಅಮೆರಿಕದಲ್ಲಿ ನೆಲಸಿರುವ ಹಿಂದುಗಳಂತೂ ಹೆಚ್ಚಿನ ಭಾರತೀಯ ಹಬ್ಬ-ಹರಿದಿನಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ಯುಗಾದಿ, ದಸರಾ, ಹೋಳಿ, ಕೃಷ್ಣ ಜನ್ಮಾಷ್ಟಮಿ, ರಾಮನವಮಿ, ಶಿವರಾತ್ರಿ-ಮೊದಲಾದ ಪರ್ವದಿನಗಳನ್ನು ನಿಷ್ಠೆಯಿಂದ ಆಚರಿಸಲಾಗುತ್ತಿದೆ. ಅಮೆರಿಕದಲ್ಲಿ ಹುಟ್ಟಿ ಬೆಳೆದ ಹಿಂದು ಮಕ್ಕಳನ್ನು ಸಾಮೂಹಿಕ ಸರಸ್ವತೀ ಪೂಜೆ, ಗಣೇಶೋತ್ಸವ, ಹಿಂದು ಸಂಸ್ಕೃತಿ ಅಭ್ಯಾಸ ಶಿಬಿರ-ಮೊದಲಾದವುಗಳಲ್ಲಿ ಸಕ್ರಿಯವಾಗಿ ತೊಡಗಿಸಲಾಗುತ್ತಿರುವುದನ್ನು ಕಾಣಬಹುದು.

ಅಮೆರಿಕನ್ನರಿಗೆ ಹೆಚ್ಚು ಇಷ್ಟವಾಗಿರುವುದು ಹಿಂದು ವಿವಾಹ ಪದ್ಧತಿ. ವಿಶಿಷ್ಟ ವೇಷ-ಭೂಷಣ ಧರಿಸಿ, ಸಪ್ತಪದಿ ತುಳಿದು, ಅಗ್ನಿ ಸಾಕ್ಷಿಯಾಗಿ ವಿವಾಹವಾಗುವ ಯುವಕ-ಯುವತಿಯರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅಮೆರಿಕದ ಹಿಂದುಗಳಲ್ಲಿ ವಿವಾಹ ವಿಚ್ಛೇದನ ಪ್ರಕರಣವು ಅಲ್ಲಿನ ಇತರರಿಗಿಂತ ಕಡಿಮೆಯಂತೆ.

(ಮುಂದುವರಿಯುವುದು..)

# *You are the Best!!!!! GOOD LUCK TO ALL*



**Prof. S. S. Rao,**
Retired Principal,
M.I.T.Kundapura
Email: ssrao52@gmail.com

I had opportunities to teach in four countries in three different Continents of the world. I am happy to share my feeling about studentsí mental ability, studentsí behavior and so on. Teaching in India especially Civil Engineering subjects, made me confident in explaining the students, the basic theory and practical applications. My five years of construction experiences came handy, while teaching Engineering subjects, which I tried to include site visits, practical problems in Construction Industry as a tool to make the student to understand the subjects thoroughly and properly.

The Indian students are taking real interest in studies and most of the students could overcome the English Language problems and can do better in their studies. Except a few, they are most regular students to class and sincere in submission, getting very good results and carrying out good project work which are useful to the technology development.

I was teaching in Middle East for almost eight years subject like Construction Technology in all four years of their studies. I tried to incorporate regular site visits, since lot of construction activities are happening in Middle East. The students had problems with English language since their earlier studies are done in Arabic and their ability to understand the subjects were not very good. They mainly study to get a degree, so that they will get jobs in their government and private sector. They have less interest in all their works and attend classes without much concentration on the subjects.

I had a chance to teach Ethiopian students. Ethiopia is a backward country in African continent. The students are lucky to have their professional education supported by the government. The schools studies are in their local language known as Amharic and their English is very poor. They have interest to study hard and transform their nation into a developed country. Students are trying to understand their respective Engineering field, and since they have a free life style, their interests in studies are also not up to the mark.

I have seen teaching and had a chance to teach the students in Glasgow (UK). The teaching methods are mostly by power point presentation in class room strength of 70+ students sometimes. Their interests in studies are good, but they have only three subjects in a semester!!

You may be into Engineering, Medicine, Law or Commerce or your chosen field for bachelor, masters or even for doctorate in India or abroad. Please take care in your studies and you are sure to get result.

With these observations I found you all, the Indian Students are the best!!! Hats off to you, but no collar- ups till you reach your goals; always think that you are great! Plan your studies meticulously with proper time management, bring name to your parents for their love and blessings, and thank your teachers and college for their support. Always pray Almighty to bring the best in you. Late Dr. Abdul Kalam, former President of our Great Nation, said dream always for better life. My dear dreaming student friends, Wish you all the best for your future.

**ಕನ್ಯಾ ಮಾಸದ ವಿಶೇಷ ದಿನಗಳು**

| | |
|---|---|
| 14-09-2015 | ಭಾದ್ರಪದ ಮಾಸಾರಂಭ |
| 16-09-2015 | ಸ್ವರ್ಣಗೌರೀ ತೃತೀಯಾ |
| 17-09-2015 | ಗಣೇಶ ಚತುರ್ಥಿ, ಕನ್ಯಾ ಸಂಕ್ರಮಣ |
| 24-09-2015 | ಸರ್ವೈಕಾದಶೀ |
| 27-09-2015 | ಹಸ್ತಾ ನಕ್ಷತ್ರಾರಂಭ ಅನಂತನ ಚತುರ್ದಶಿ |
| 28-09-2015 | ಮಹಾಲಯ ಆರಂಭ |
| 01-10-2015 | ಸಂಕಷ್ಟಹರ ಚತುರ್ಥಿ |
| 08-10-2015 | ಸರ್ವೈಕಾದಶೀ |
| 11-10-2015 | ಚಿತ್ರಾ ಮಹಾನಕ್ಷತ್ರಾರಂಭ |
| 12-10-2015 | ಮಹಾಲಯ ಅಮಾವಾಸ್ಯೆ |
| 13-10-2015 | ನವರಾತ್ರಿ ಆರಂಭ ಅಶ್ವಯುಜ ಮಾಸಾರಂಭ |
| 17-10-2015 | ತುಲಾ ಸಂಕ್ರಮಣ |


ಎಮ್. ದೇವಾನಂದ್ ಭಟ್
Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ



**ಡಾ॥ ವೈ. ಸುದರ್ಶನ ರಾವ್**

## ಸ್ವಚ್ಛತೆ ಹಾಗೂ ಆರೋಗ್ಯ

(...ಮುಂದುವರೆದುದು )

ಈ ಸಂಚಿಕೆಯಲ್ಲಿ ಘನತ್ಯಾಜ್ಯಗಳ ವಿಲೇವಾರಿಯನ್ನು ಕೈಗೆತ್ತಿಕೊಳ್ಳೋಣ. ನಾವು ಉಪಯೋಗಿಸಿ ಬೇಡವೆಂದು ಬಿಸಾಕಿದ ವಸ್ತುಗಳೆಲ್ಲಾ ಘನತ್ಯಾಜ್ಯವಾಗುತ್ತದೆ. ದಿನ ಕಳೆದಂತೆ ರಾಶಿ ದೊಡ್ಡದಾಗುತ್ತ ಬರುವ ಈ ತ್ಯಾಜ್ಯವನ್ನು ವಿಲೇವಾರಿ ಮಾಡಲು ಸ್ವಲ್ಪ ಬುದ್ಧಿವಂತಿಕೆ, ವಿವೇಚನೆ ಹಾಗೂ ಬದ್ಧತೆ ಬೇಕಾಗುತ್ತದೆ. ಈ ಬದ್ಧತೆ ಇಲ್ಲದವರು ಈ ಕಸವನ್ನು ಪ್ಲಾಸ್ಟಿಕ್ ತೊಟ್ಟೆಯಲ್ಲಿ ಕಟ್ಟಿ ಆಚೆ ಕಂಪೌಂಡಿಗೆ ಬಿಸಾಕಿ ಈ ಕಸದ ವಿಲೇವಾರಿ ಮಾಡುತ್ತಿರುವುದು ಜಾಗತಿಕವಾಗಿ ಎಲ್ಲಾ ದೇಶಗಳು ಎದುರಿಸುತ್ತಿರುವ ಸಮಸ್ಯೆ. ಇದರ ಸಮರ್ಪಕ ವಿಲೇವಾರಿಯ ಬಗ್ಗೆ ಜನರಿಗೆ ಮಾಹಿತಿ ನೀಡದಿರುವುದೂ ಸರಕಾರದ ತಪ್ಪೆನ್ನಿ.

ಘನ ತ್ಯಾಜ್ಯಗಳನ್ನು ಬಟ್ಟೆ ಹಾಗೂ ಪೇಪರ್‌ಗಳೆಂಬ ಮಣ್ಣಾಗುವ ಗುಣವುಳ್ಳ ಜೈವಿಕ ತ್ಯಾಜ್ಯಗಳು, ಗಾಜು ಹಾಗೂ ಲೋಹವೆಂಬ ಮಣ್ಣಾಗದಿದ್ದರೂ ನೈಸರ್ಗಿಕವಾದ ತ್ಯಾಜ್ಯಗಳು ಹಾಗೂ ಪ್ಲಾಸ್ಟಿಕ್, ಫೈಬರ್ ಇತ್ಯಾದಿ ಕೃತಕ ತ್ಯಾಜ್ಯಗಳೆಂದು ವಿಭಾಗಿಸಬಹುದು. ಈ ತ್ಯಾಜ್ಯಗಳ ವಿಲೇವಾರಿಯ ಮೊತ್ತ ಮೊದಲನೆಯ ಹೆಜ್ಜೆಯೆಂದರೆ ಒಂದು ವಸ್ತುವನ್ನು ಇನ್ನಿದು ಬಿಸಾಡುವ ವಸ್ತು/ತ್ಯಾಜ್ಯ ಎಂದು ನಿರ್ಧರಿಸಿದಾಕ್ಷಣ ಅದು ಈ ಮೂರರಲ್ಲಿ ಯಾವ ವರ್ಗಕ್ಕೆ ಸೇರಿದುದೆಂದು ನಿರ್ಧರಿಸುವುದು.

ಬಟ್ಟೆ ಹಾಗೂ ಪೇಪರ್‌ಗಳನ್ನು ಬಿಟ್ಟು ಇನ್ನು ಯಾವುದೇ ಘನ ತ್ಯಾಜ್ಯವು ಗೊಬ್ಬರವಾಗುವುದಿಲ್ಲ. ವರ್ಷಗಟ್ಟಲೇ ಕಳೆದರೂ ರೂಪಾಂತರವಾಗುವುದಿಲ್ಲ. ಪ್ರತಿದಿನವೂ ಉಪಯೋಗಿಸಿ ಹಳತಾದ ವಸ್ತುಗಳನ್ನು ಬಿಸಾಕಲೇಬೇಕಾದುದರಿಂದ ದಿನಹೋದಂತೆ ಕಸದ ರಾಶಿದೊಡ್ಡದಾಗುವುದು ಅನಿವಾರ್ಯ. ಕಣ್ಣ ಮುಂದಿರುವ ಕಸದ ರಾಶಿಯನ್ನು ಗುಡಿಸಿ ಸಾಗಿಸಿದರೆ ತನ್ನ ಉಪದ್ರವನ್ನು ಇನ್ನೊಬ್ಬರ ಕುತ್ತಿಗೆಗೆ ಕಟ್ಟಿದಂತಾಯಿತೆನ್ನಬಹುದೇ ವಿನಃ ವಿಲೇವಾರಿಯೆನ್ನಲಾಗದು. ಹಾಗಾದರೆ ಸಮಸ್ಯೆಗೆ ಪರಿಹಾರವೇನು?

ಮೊದಲನೆಯದಾಗಿ ಆದಷ್ಟು ತ್ಯಾಜ್ಯ ಉತ್ಪತ್ತಿಯಾಗುವುದನ್ನು ತಡೆಯುವುದು. ಮಾನವನು ಕೃತಕವಾಗಿ ತಯಾರಿಸಿದಂತೆ ಕಾಣುವ ವಸ್ತು ಕೂಡಾ ನೈಸರ್ಗಿಕವಾಗಿ ದೊರಕುವ ವಸ್ತುವಿನೊಂದರ ರೂಪಾಂತರ ಮಾತ್ರ ಎಂಬುದನ್ನು ಗಮನಿಸಿರಿ (ಉದಾ : ಪೇಪರ್. ಇದು ಬಿದಿರಿನಿಂದ ತಯಾರಾಗುವ ವಸ್ತು.) ಪ್ರತಿಯೊಂದು ವಸ್ತುವನ್ನು ಮಿತವಾಗಿ ಬಳಸುವುದರಿಂದ ತ್ಯಾಜ್ಯದ ಉತ್ಪತ್ತಿ ಕಡಿಮೆಯಾಗುವುದು ಮಾತ್ರವಲ್ಲ ನೈಸರ್ಗಿಕ ಸಂಪನ್ಮೂಲಗಳೂ ಬೇಗನೇ ಖರ್ಚಾಗುವುದಿಲ್ಲ. ಕಾರ್ಖಾನೆಯೊಂದರಲ್ಲಿ ವಸ್ತುವು ತಯಾರಾಗುವಾಗ ಅಲ್ಲೊಂದಷ್ಟು ಇನ್ನೊಂದು ನಮೂನೆಯ ತ್ಯಾಜ್ಯ ಉತ್ಪಾದನೆಯಾಗುತ್ತದೆಂಬುದನ್ನು ಗಮನಿಸಿರಿ. ಹಾಗಾಗಿ ಪ್ರತಿಯೊಬ್ಬರೂ ಯಾವುದೇ ವಸ್ತುವನ್ನು ಉಪಯೋಗಿಸುವಾಗ ಅಗತ್ಯವಿದ್ದರೆ ಮಾತ್ರಾ ಉಪಯೋಗ, ಕನಿಷ್ಟ ಉಪಯೋಗ, ಸಂಪೂರ್ಣ ಉಪಯೋಗ ಹಾಗೂ ಮರು ಉಪಯೋಗ ಎಂಬ ನಾಲ್ಕು ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು.

ಯಾವುದೇ ಕೆಲಸಕ್ಕೆ ಉಪಯೋಗಿಸುವ ವಸ್ತು ಕನಿಷ್ಟತ್ಯಾಜ್ಯವನ್ನು ಉತ್ಪಾದಿಸುವಂತಾಗಿದ್ದಿರಬೇಕು. ಹಾಗಾಗಿ ಯಾವುದೇ ವಸ್ತುವನ್ನು ಉಪಯೋಗಿಸುವಾಗ ಇದರ ಬದಲು ಬೇರೊಂದು ವಸ್ತುವನ್ನು ಬಳಸಿದರೆ ತ್ಯಾಜ್ಯದ ಉತ್ಪತ್ತಿ ಕಡಿಮೆಯಾದೀತೆ ಎಂಬ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳುವುದನ್ನು ರೂಢಿಮಾಡಿಕೊಳ್ಳಬೇಕು. ಉದಾ : ಪೇಪರಿನಲ್ಲಿ ಪತ್ರ ಬರೆಯುವ ಬದಲು ಇ-ಮೇಯ್ಲ್ ಮುಖಾಂತರ ಪತ್ರ ವ್ಯವಹಾರ ಮಾಡುವುದು, ಪೆಟ್ರೋಲ್ ವಾಹನಗಳ ಬದಲು ಇಲೆಕ್ಟ್ರಿಕ್ ವಾಹನಗಳ ಬಳಕೆ, ವಿದ್ಯುಚ್ಛಕ್ತಿಯ ಬದಲು ಸೋಲಾರ್‌ನ ಬಳಕೆ ಇತ್ಯಾದಿ.

ತ್ಯಾಜ್ಯದಲ್ಲಿಯೂ ನೈಸರ್ಗಿಕವಾಗಿ ಮಣ್ಣಾಗುವ ತ್ಯಾಜ್ಯಗಳು ಇತರ ತ್ಯಾಜ್ಯಗಳಿಗಿಂತ ಉತ್ತಮ. ಹಾಗಾಗಿ ಪ್ಲಾಸ್ಟಿಕ್ ತೊಟ್ಟೆಗಳ ಬದಲು ಬಟ್ಟೆಯ ಚೀಲಗಳು, ಪೇಪರಿನ ಕವರುಗಳನ್ನು ಅಂದರೆ ಆದಷ್ಟು ಬಟ್ಟೆ ಹಾಗೂ ಪೇಪರಿನ ವಸ್ತುಗಳಿಗೆ ಪ್ಲಾಸ್ಟಿಕ್ ವಸ್ತುಗಳಿಗಿಂತ ಪ್ರಾಶಸ್ತ್ಯ ಕೊಡಿರಿ.

ಇವಿಷ್ಟು ತ್ಯಾಜ್ಯ ಉತ್ಪತ್ತಿಯನ್ನು ಕನಿಷ್ಟಗೊಳಿಸುವ ಬಗೆಯಾಯಿತು. ಕಸ ವಿಲೇವಾರಿಯ ಎರಡನೇ ಉಪಾಯವೆಂದರೆ ತ್ಯಾಜ್ಯದ ಮರುಬಳಕೆ. ಪ್ರಕೃತಿಯಲ್ಲಿ ಒಂದು ಇನ್ನೊಂದರ ಆಹಾರ ಎಂಬ ನಿಯಮದಲ್ಲಿ ಕಸವಿಲೇವಾರಿ ನಡೆಯುವ ಸೂತ್ರದಂತಿದೆ ಈ ಪರಿಹಾರ. ನಮಗೆ ತ್ಯಾಜ್ಯವೆನಿಸಿದ್ದು ಇನ್ನೊಬ್ಬರಿಗೆ ಉಪಯೋಗ ಬರಬಹುದು ಅಥವಾ ನಮಗೇ ಇನ್ನೊಂದು ದಿನ ಉಪಯೋಗವಾದೀತು ಹಾಗಾಗಿ ಎಸೆಯುವ ಮುನ್ನ ಯೋಚಿಸಿ ಮರುಬಳಕೆ ಸಾಧ್ಯವೇ? (ಪೊಟ್ಟಣಕ್ಕೆ ಕಟ್ಟುವ ನೂಲೂ ಸಹ ತೆಗೆದಿಟ್ಟರೆ ಇನ್ನೊಮ್ಮೆ ಬಳಸಲು ಸಾಧ್ಯವಿದೆ) ಈ ನಿಟ್ಟಿನಲ್ಲಿ ಸೆಕೆಂಡ್ ಹ್ಯಾಂಡ್ ಅಂಗಡಿಯವರ ಕೆಲಸ ಶ್ಲಾಘನೀಯ. ಎಸೆಯುವುದೇ ಆದರೆ ಕಸವನ್ನು ಬಟ್ಟೆ ಪೇಪರ್ ಗಾಜು ಲೋಹ ಹಾಗೂ ಪ್ಲಾಸ್ಟಿಕ್ ಎಂದು ವಿಂಗಡಿಸಿ ಶೇಖರಿಸಿಡಿರಿ. ಈ ಎಲ್ಲಾ ವಸ್ತುಗಳನ್ನು ಪ್ರತ್ಯೇಕವಾಗಿಯೇ ಗುಜರಿಯವರಿಗೆ ಕೊಟ್ಟು ಬಿಡಿ. ಅವರು ಮರುಬಳಕೆಯವರಿಗೆ ತಲುಪಿಸುತ್ತಾರೆ.

ಮೇಲಿನ ಎರಡು ಉಪಕ್ರಮಗಳಿಂದ ನಮ್ಮ ಮನೆಗಳಲ್ಲಿ ತಯಾರಾಗುವ ತ್ಯಾಜ್ಯ ಎಷ್ಟು ಕನಿಷ್ಟ ಮಟ್ಟಕ್ಕಿಳಿಯುತ್ತದೆಂದರೆ ಇದನ್ನು ಕಾರ್ಯಗತಗೊಳಿಸದೇ ನೀವು ನಂಬಲಾರಿರಿ. ಮರುಬಳಕೆ ಸಾಧ್ಯವೇ ಇಲ್ಲದ ಬ್ಯಾಟರೀ ಸೆಲ್ಲುಗಳು, ಅತೀ ತೆಳ್ಳಗಿನ ಪ್ಲಾಸ್ಟಿಕ್, ಕಂಪ್ಯೂಟರ್‌ನ ಸಿ.ಡಿಗಳು, ವಿಂಗಡಿಸಲಾಗದ ವಸ್ತುಗಳು, ಉಪಯೋಗಿಸಿ ಜೀರ್ಣಾವಸ್ಥೆಗೆ ತಲುಪಿದ ವಸ್ತುಗಳು ಹೀಗೆ ಕೆಲವೇ ಕೆಲವು ವಸ್ತುಗಳು ನಿಜವಾಗಿಯೂ ತ್ಯಾಜ್ಯಗಳಾಗುತ್ತವೆ. ಇಂತಹಾ ವಸ್ತುಗಳಲ್ಲಿ ಅಪಾಯಕಾರೀ ರಾಸಾಯನಿಕಗಳಿರುವುದರಿಂದ ಸುಡುವುದು, ಎಸೆಯುವುದು ನಿಷಿದ್ದ. ಹಾಗಾಗಿ ನೀರಿನ ಮೂಲಗಳಿಗಿಂತ ದೂರವಾಗಿ ಆಳವಾಗಿ ಹೂಳುವುದು ಸರಿಯಾದ ಉಪಾಯ.

ಹೀಗೆ ಎಲ್ಲರೂ ಅವರವರ ಮನೆಯಲ್ಲಿ ತಯಾರಾಗುವ ಎಲ್ಲಾ ತ್ಯಾಜ್ಯಗಳನ್ನು ಅಂದರೆ ದೈಹಿಕ ತ್ಯಾಜ್ಯಗಳಿಗೆ ಶೌಚಾಲಯದ ಬಳಕೆ, ಅಡಿಗೆ ಮನೆಯ ಎಂಜಲು ತ್ಯಾಜ್ಯವನ್ನು ಗುಂಡಿಯಲ್ಲಿ ಹೂಡಿ ವಿಲೇವಾರಿ ಮಾಡುವುದು ಹಾಗೂ ಘನ ತ್ಯಾಜ್ಯವನ್ನು ಈ ಲೇಖನದಲ್ಲಿ ವಿವರಿಸಿದಂತೆ ವಿಲೇವಾರಿ ಮಾಡಿದರೆ ಸ್ವಚ್ಛ ಭಾರತದ ಕನಸು ನನಸಾಗುವುದು ಕಷ್ಟದ ಕೆಲಸವೇನಲ್ಲ

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## ಆಗಮನ ನಿರ್ಗಮನ

(ಪುನರಪಿ ಜನನಂ-ಪುನರಪಿ ಮರಣಂ)

**ದೃಶ್ಯ-1**

ಜಗದ ನಿಯಮವೇ ಆಗಮನ-ನಿರ್ಗಮನ
'ಹುಟ್ಟು' ಕೆಲವರಿಗೆ ಸಂತಸದ-ಆಗಮನ
'ಸಾವು' ಹಲವರಿಗೆ ದುಃಖದ-ನಿರ್ಗಮನ
'ಬಾಲ್ಯ' ವಿದ್ಯಾದೇಗುಲಕ್ಕೆ- ಆಗಮನ
'ವಿದ್ಯೆ' ಕಲಿತು ಬೀಗುತ್ತಾ-ನಿರ್ಗಮನ
'ವೃತ್ತಿ' ಅರಸುತ್ತಾ ಹೊರಪ್ರಪಂಚಕ್ಕೆ- ಆಗಮನ
ಜೀವನ ಸಂಗಾತಿ ಹುಡುಕುತ್ತಾ -ನಿರ್ಗಮನ
ಮನಮೆಚ್ಚಿದ ಕನ್ಯೆಯ- ಆಗಮನ
ಜೀವನ ಪಾವನ ಗಿ 'ಕತ್ತಲು'- ನಿರ್ಗಮನ
ಮನೆಬೆಳಗಲು ನವಚೈತನ್ಯಗಳ- ಆಗಮನ
ಚೈತನ್ಯವಿಲ್ಲದ ಹಿರಿತಲೆಗಳ- ನಿರ್ಗಮನ
ಸಾಮರಸ್ಯ ತಪ್ಪಿದರೆ, 'ಆಪತ್ತು'-ಆಗಮನ
ಸಂಸಾರದಲ್ಲ ಒಡಕು, ನಿರ್ಭಾಗ್ಯರ-ನಿರ್ಗಮನ

**ದೃಶ್ಯ-2**

ಆಗ 'ಜೈಕಿಸಾನ್' ಹಸಿರು ಕ್ರಾಂತಿ-ಆಗಮನ
ಈಗ ಸಾಲದ ಶೂಲಕ್ಕೆ ಗಿ ಕೃಷಿಕರ - ನಿರ್ಗಮನ
"ಮೊಸಳೆ ಕಣ್ಣೀರ" ಆಡಳಿತದವರ ಗಿಆಗಮನ
ವಿರೋಧ ಪಕ್ಷದ ಒತ್ತಡ, ಸರಕಾರದ - ನಿರ್ಗಮನ
ಹಾರ ತುರಾಯಿ ಸಹಿತ ಮಂತ್ರಿಮಾಗಧರ- ಆಗಮನ
ದೇಶಕಾಯುವವನ ವೀರೋಚಿತ- ನಿರ್ಗಮನ
ವಿದೇಶದ ಗಣ್ಯರಿಗೆ ನಮನ, ಅವರ ಗಿ ಆಗಮನ
ಆರಕ್ಷಕರಿಗೆ ಇಲ್ಲ ಸಮ್ಮಾನ, ಗಣ್ಯರ - ನಿರ್ಗಮನ
ಭಾರತ ಆಕ್ರಮಿಸಲು ವೈರಿಗಳ ಗಿ ಆಗಮನ
'ಜೈ ಜವಾನ್' ದಿಟ್ಟ ಹೋರಾಟಕ್ಕೆ - ಶತ್ರುಗಳ - ನಿರ್ಗಮನ
ಆಗಸ್ಟ್ ಹದಿನೈದರ ಸಂಭ್ರಮದ ಗಿ ಆಗಮನ
ಧ್ವಜವಂದನೆಗೈದು ಸಿಹಿಹಂಚಿ, ನಮ್ಮ - ನಿರ್ಗಮನ
ನಮ್ಮ ಪೂರ್ವಪುಣ್ಯಾ - ಭರತ ಭೂಮಿಗೆ ಗಿ ಆಗಮನ
ಸುಂದರ ಸಮಾಜ ನಿರ್ಮಿಸಿ ಅಂತಿಮ - ನಿರ್ಗಮನ
॥ಜಯಹೋ ಭಾರತಮಾತಾ॥

**ಜಿ.ಕೆ.ಕೋಳ್ಪೆ, ಉಡುಪಿ.**

## ಕವನ



ಓ ನೀಲಕಂಠಾ ಪ್ರಭೋ ಶಂಕರಾ। ಉಮಾ ಶಂಕರಾ ನಾಗಾಭರಣ ಪಾರ್ವತೀ ಲೋಲಾ॥
ನಿನ್ನೀ ಅಂಗದ ಪೂಜೆಗಳಾ। ಬಣ್ಣಿಸೇ ಮಹಿಮೆಯ ಮಾತುಗಳಾ ಕಾಣಿಸು ತಂದೆ ಶಂಕರಾ ॥೧॥
ಇಹದಲ್ಲು ಪರದಲ್ಲು ನೆನವಂತ ನಾಮ। ಭಕುತರ ಮನದಲ್ಲ ಕುಣಿದಾಡಿದ ನಾಮ।
ಮನದಲ್ಲ ಭಕ್ತಿಯ ಕಲ್ಲಾಗಿ ಮುನಿಸುತನಿಗೆ ಜೀವನ ತಂದಾ। ಎನ್ನಯ ನಾಮವ ಭಜಿಸುವೆನಯ್ಯ ಶಂಕರಾ ಆ..ಆ..ಆ ॥೨॥
ಪಾರ್ವತಿಯು ಪೂಜಿಸುವ ಪರಶಿವನ ನಾಮ ಮನದಲ್ಲ ನೆಲೆನಿಂತ ಆ ಶಿವನ ಧ್ಯಾನ ನೆನೆದರೆ
ಎಲ್ಲೂ ಇರುವೆ ನಿನ್ನ ನಾಮವನೆಂದೂ ಬಿಡೆನು ಕಾಯೋ ನೀ ನನ್ನಾ ದೇವನೇ ಆ..ಆ..ಆ ॥೩॥

**- ಪಿ.ಸಿ. ರಾವ್,**

## ಜೀವನದೊಳಗೆ ನಾವು

ಬದುಕು : "ಬದುಕು ಜಟಕಾಬಂಡಿ-ವಿಧಿ ಅದರ ಸಾಹೇಬ" ಎಂದಿದ್ದಾರೆ ಡಿ.ವಿ.ಜಿ. ಬದುಕು ಜಟಕಾ ಬಂಡಿ ಹೌದೇ? ನನಗೇನು ಹಾಗೆ ಅನಿಸುತ್ತಿಲ್ಲ. ಏಕೆ ಎಂದು ಕೇಳಿದ್ದೀರ. ಬದುಕು ಜಟಕಾ ಬಂಡಿಯಾದರೆ ಗಂಟೆಗೆ 2ರಿಂದ 3 ಕಿಲೋಮೀಟರ್ ವೇಗದಲ್ಲಿ ಓಡಬೇಕು. ಆದರೆ ತಿರುವುಗಳಿಂದ ಕೂಡಿದ ಈ ಜೀವನ ಮೆಟ್ರೋ ರೈಲಿಗಿಂತ ವೇಗದಲ್ಲಿ ಚಲಿಸುತ್ತದೆ.

ಈ ಕ್ಷಣದಲ್ಲಿ ಆಕಾಶದಲ್ಲಿ ಇದ್ದ ನಾವು ಮರುಕ್ಷಣದಲ್ಲಿ ಪಾತಾಳದಲ್ಲೇ ಇರಬಹುದು. ಕೋಟ್ಯಾಧಿಪತಿ ಆಗಿರುವವನು ಮರುದಿನವೆ ಭಿಕಾರಿಯಾಗಬಹುದು. ಒಳ್ಳೆಯವರಿಗೆ ಬೆಲೆಯೇ ಇರದಿರಬಹುದು. ಪಾಪಿಗಳು ಮೋಜಿನಿಂದ ಜೀವನ ಸಾಗಿಸುತ್ತಿರಬಹುದು, ಗೆದ್ದವರು ಸೋಲಬಹುದು, ಸೋತವರು ಸಾಯಬಹುದು, ಆದರೂ ಈ ಬದುಕು ಸುಂದರ.

ಸರಕಾರದವರು ನಮ್ಮಂತಹ ಜನಸಾಮಾನ್ಯರ ಬಗ್ಗೆ ಗಮನ ಹರಿಸದೇ ಇರಬಹುದು, ನಮ್ಮ ರಸ್ತೆಗಳು ಕುಲಗೆಟ್ಟು ಹೋಗಿರಬಹುದು. ಬರಬೇಕಾದ ಸಂಬಳ ಇನ್ನೂ ಬಾರದೇ ಇರಬಹುದು, ದಿನವಿಡೀ ವಿದ್ಯುತ್ ಇಲ್ಲದೆಯೇ ಇರಬಹುದು, ಉಚಿತವಾಗಿ ಆಗಬೇಕಾದ ಕೆಲಸಕ್ಕೆ ಲಂಚ ನೀಡಬೇಕಾಗಿ ಬರಬಹುದು, ಆದರೂ ಈ ಜನಜೀವನವೇ ನಿಜವಾಗಿಯೂ ತುಂಬಾ ಸುಂದರ.

ವಿಧಿ ಸಾಹೇಬನಾದ ನಮ್ಮ ಬದುಕು ಪ್ರಾಣಿಗಿಂತಲೂ ಮಿಗಿಲಲ್ಲವೇ? ನಮಗೆ ನಮಗಾದ ದುಃಖ ದುಮ್ಮಾನಗಳನ್ನು ಹೊರ ಹಾಕಲು ಭಾಷೆ ಎಂಬ ಸಾಧನವಿದೆ. ಬರವಣಿಗೆ ಎಂಬ ತಂತ್ರವಿದೆ. ಗೀತೆಗಳೆಂಬ ಭಾವವಿದೆ.ನಮ್ಮಲ್ಲಿ ಉಂಟಾದ ಭಾವನೆಗಳನ್ನು ಹೊರಗಟ್ಟಿ ಮರುಕ್ಷಣ ಅದನ್ನು ಮರೆತಂತೆ ಬದುಕಿನೊಂದಿಗೆ ಮುಂದೆ ಸಾಗುತ್ತೇವೆ.

ಬದುಕಿನಲ್ಲಿ ಏನೇ ಏರುಪೇರು ಬರಲಿ ನಾವು ಅದನ್ನು ಸ್ವೀಕರಿಸಿ ಮುಂದುವರಿದಾಗ ಬದುಕು ನಿಜವಾಗಿಯೂ ಸುಂದರವಾಗುತ್ತದೆ. ಈ ವೇಗದ ಯುಗದಲ್ಲಿ ಕಳೆದು ಹೋಗುತ್ತಿರುವ ಬದುಕನ್ನು ಮುಗ್ಧ ಕಂದಮ್ಮಗಳ ಆ ನಗೆಯಲ್ಲಿ, ಗಿಡದಲ್ಲಿ ಅರಳಿ ನಿಂತಿರುವ ಹೂವಿನ ಸೌಂದರ್ಯದಲ್ಲಿ, ಬೀಸಿ ಬರುವ ತಂಗಾಳಿಯಲ್ಲಿ , ಟಪ ಟಪನೆ ಬೀಳುವ ಮಳೆಯಲ್ಲಿ ಕಂಡುಕೊಳ್ಳಿ .

ಒಂದು ಹಿಂದಿ ಚಿತ್ರಗೀತೆಯಲ್ಲಿ "ಜಿಂದಗಿ ಏಕ್ ಸಫರ್ ಹೈ ಸುಹಾನಾ ಯಹ ಕಲ್ ಕ್ಯಾ ಹೋಗ ಕಿಸ್ನೆ ಜಾನ" ಎಂದಿದ್ದಾರೆ. ನಾಳೆ ಏನಾಗುವುದೋ ಯಾರು ಬಲ್ಲರು, ಹಾಗಾಗಿ ಈ ಕ್ಷಣದೊಡನೆ ಸುಖವಾಗಿ ಬದುಕಲು ಕಲಿಯಿರಿ.

**-ಅಮೃತ ರಾವ್,** ಬಿ.ಇ., ವಾಮಂಜೂರು

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2015-2016ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2015ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು, ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),**
**ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754**

---

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಉದಯಚಂದ್ರ ಪ್ರತಿಭಾ ಪುರಸ್ಕಾರ 2015-16

**ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2014-15ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2015ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್‌ಗಳಿಸಿದ ಬಗ್ಗೆ ಹಾಗೂ ಬ್ಯಾಂಕ್ ಪಾಸ್‌ಬುಕ್‌ನ ಮೊದಲನೇ ಪುಟದ ಜೆರಾಕ್ಸ್ ಪ್ರತಿ (ಖಾತೆ ಸಂಖ್ಯೆ ಇರುವ) ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.**

**ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು. ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.**

**- ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

---

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್‌ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ಹಾಗೂ ಬ್ಯಾಂಕ್ ಪಾಸ್‌ಬುಕ್‌ನ ಮೊದಲನೇ ಪುಟದ ಜೆರಾಕ್ಸ್ ಪ್ರತಿ (ಖಾತೆ ಸಂಖ್ಯೆ ಇರುವ) ತಾ.30-09-2015ರ ಒಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

---

## ದಿ|ಕೆಡೆಂಬಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**C/o ಸದಾಶಿವ ಶಾಸ್ತ್ರಿ, 3-68/7, ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575 019.**

**2014-15ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಠ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 11-10-2015. ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 25-09-2015ರ ಒಳಗೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.**

---

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.01-10-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-09-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.18-09-2015 ಹಾಗೂ ತಾ.02-10-2015, ತಾ.18-10-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

### ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ

---

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಹಾಗೂ ಬ್ಯಾಂಕ್ ಪಾಸ್‌ಬುಕ್‌ನ ಮೊದಲನೇ ಪುಟದ ಜೆರಾಕ್ಸ್ ಪ್ರತಿ (ಖಾತೆ ಸಂಖ್ಯೆ ಇರುವ) ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2015ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ,**
**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

---

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2015-16ನೇ ಸಾಲಿನ **ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ** ವಿದ್ಯಾರ್ಥಿವೇತನಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾ**ಗಿಯೂ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2015. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**
**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101**

---

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಕಾಸರಗೋಡು

## 20ನೇ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶ

### ಆಮಂತ್ರಣ ಪತ್ರಿಕೆ

ಪ್ರಿಯರೇ,

ಇದೇ ಬರುವ ತಾ.04-10-2015ನೇ ಆದಿತ್ಯವಾರ ಬೆಳಿಗ್ಗೆ 8-30 ಗಂಟೆಗೆ ಸರಿಯಾಗಿ ನಮ್ಮ ಸಂಘದ 20ನೇ ವಾರ್ಷಿಕ ಮಹಾಸಭೆ, ನೂತನ ಪದಾಧಿಕಾರಿಗಳ ಆಯ್ಕೆ ಮತ್ತು ಜಿಲ್ಲಾ ಸಮಾವೇಶವನ್ನು ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯದ ಪ್ರಾಂಗಣದಲ್ಲಿ ಜರಗಿಸುವರೆ ನಿಶ್ಚಯಿಸಿರುತ್ತೇವೆ. ತತ್ಸಂಬಂಧ ನಡೆಯಲಿರುವ ಸದಸ್ಯರಿಗೆ ಮತ್ತು ಪುಟಾಣಿ ಮಕ್ಕಳಿಗೆ ಸ್ಪರ್ಧೆಗಳು, ಹಿರಿಯರಿಗೆ ಸನ್ಮಾನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷೆ.

| ಶ್ರೀ ಎ.ವಿ.ಶ್ಯಾನುಭೋಗ್ | ಡಾ| ಎಂ.ಸತ್ಯನಾಥ | ಶ್ರೀ ಎ. ಮನೋಹರ್ |
|---|---|---|
| ಗೌರವಾಧ್ಯಕ್ಷರು | ಅಧ್ಯಕ್ಷರು | ಕಾರ್ಯದರ್ಶಿ |

## ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಡಾ। ಲೋಕೇಶ್ ರಾವ್ ಬಿ.ಕೆ.



ಉಡುಪಿ ಜಿಲ್ಲೆಯ ಖ್ಯಾತ ಚರ್ಮರೋಗ ಹಾಗೂ ಸೌಂದರ್ಯವರ್ಧಕ ಚಿಕಿತ್ಸೆಗಳ ತಜ್ಞರಾದ ಡಾ। ಲೋಕೇಶ್ ರಾವ್‌ರವರು ಮಹಾಪೋಷಕ ರಾಗಿ ಶ್ರೀ ಶಾರದಾ ಬಳಗವನ್ನು ಕೂಡಿ ಕೊಂಡಿದ್ದಾರೆ. ಅವರಿಗೆ ನಾವು ತುಂಬುಹೃದಯದ ಸ್ವಾಗತವನ್ನು ಬಯಸುತ್ತೇವೆ.

ಡಾ। ಲೋಕೇಶ ರಾವ್‌ರವರು ಮೂಲತಃ ಬೆಳ್ತಂಗಡಿ ತಾಲೂಕಿನ ಬಂಗಾಡಿ ಕಿಲ್ಲೂರಿನವರು. ಶ್ರೀ ಸುಬ್ಬರಾವ್ ಬಿ.ಕೆ ಹಾಗೂ ಶ್ರೀಮತಿ ಲಕ್ಷ್ಮೀ ದಂಪತಿಗಳ ಪುತ್ರ. ಪ್ರಸಿದ್ಧ ಕೂಡ್ಲು ಸದಾಶಿವ ದೇವಸ್ಥಾನ ಇವರ ಮನೆತನಕ್ಕೆ ಸೇರಿದ್ದು. ಇವರು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯದಿಂದ ಎಂ.ಬಿ.ಬಿ.ಎಸ್ ಪದವಿಯನ್ನೂ ದಾವಣಗೆರೆಯ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದಿಂದ ಎಂ.ಡಿ. ಪದವಿಯನ್ನೂ ಪಡೆದಿದ್ದಾರೆ. ಮುಂಬಯಿಯ ಪ್ರಸಿದ್ಧ ನಾನಾವತಿ ಆಸ್ಪತ್ರೆಯಲ್ಲಿ ಸೌಂದರ್ಯವರ್ಧಕ ಚಿಕಿತ್ಸಾಕ್ರಮಗಳಲ್ಲಿ ವಿಶೇಷ ತರಬೇತಿಯನ್ನೂ, ಚರ್ಮರೋಗದಲ್ಲಿ ಲೇಸರ್ ಚಿಕಿತ್ಸೆಯ ತರಬೇತಿಯನ್ನು ಬ್ಯಾಂಕಾಕ್‌ನ Kasemrad ಆಸ್ಪತ್ರೆಯಲ್ಲೂ ಪಡೆದಿರುವರು. ಸುಮಾರು ಹದಿನಾರು ವರ್ಷಗಳಿಂದ ಉಡುಪಿಯಲ್ಲಿ ತಜ್ಞವೈದ್ಯರಾಗಿ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದಾರೆ. ಬಡಗುಪೇಟೆಯಲ್ಲಿರುವ ನಾನಾವತೀ ಆರ್ಕೇಡ್‌ನಲ್ಲಿ ಇವರ ಸುಸಜ್ಜಿತವಾದ ಚಿಕಿತ್ಸಾ ಕೇಂದ್ರವಿದೆ. ಇವರು ಕಾಸ್ಮೆಟಾಲಜಿ ಸೊಸೈಟಿ ಆಫ್ ಇಂಡಿಯಾದ ಸ್ಥಾಪಕ ಸದಸ್ಯರಾಗಿದ್ದಾರೆ. ವಿವಿಧ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕಮ್ಮಟಗಳಲ್ಲಿ ತಮ್ಮ ಸಂಸ್ಥೆಯನ್ನು ಪ್ರತಿನಿಧಿಸಿರುವರು. ಹೀಗಿದ್ದರೂ ಹುಟ್ಟೂರನ್ನು ಮರೆಯದೆ ಪ್ರತೀ ಆದಿತ್ಯವಾರ ತನ್ನೂರಿಗೆ ಭೇಟಿನೀಡಿ ಹಳ್ಳಿಗರಿಗೆ ಹಾಗೂ ಸಮಾಜಬಾಂಧವರಿಗೆ ಉಚಿತ ಚಿಕಿತ್ಸೆ ನೀಡುವುದನ್ನು ಇಂದಿನವರೆಗೂ ತಪ್ಪಿಸಿಲ್ಲ. ಕೃಷಿ ಇವರ ಹವ್ಯಾಸ. ಕೃಷಿಯಲ್ಲಿರುವ ಇವರ ಅಪಾರ ಜ್ಞಾನ ಹಾಗೂ ಆಸಕ್ತಿಯನ್ನು ಇವರ ಕೈದೋಟದಲ್ಲಿ ಕಾಣಬಹುದು. ಇವರ ಅನೇಕ ವೈದ್ಯಕೀಯ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.

ಎಂ.ಟೆಕ್ (ಮೈಕ್ರೋ ಇಲೆಕ್ಟ್ರಾನಿಕ್ಸ್) ಪದವೀಧರೆ ಹಾಗೂ ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೀನಿಯರ್ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ರಮ್ಯಾರವರು ಇವರ ಧರ್ಮಪತ್ನಿ. ಪ್ರತಿಭಾವಂತ ಅವಳಿ ಮಕ್ಕಳಾದ ಉಜ್ವಲ್ ಹಾಗೂ ಪ್ರಜ್ವಲ್ ಆರನೆಯ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಡಾ। ಲೋಕೇಶ್ ರಾವ್‌ರ ಸೇವೆಯು ನಮ್ಮ ಸಮಾಜಕ್ಕೆ ಇನ್ನೂ ಹೆಚ್ಚೆಚ್ಚು ದೊರಕಲಿ ಹಾಗೂ ಅವರ ಜ್ಞಾನ ಮತ್ತು ಅನುಭವಗಳ ಪ್ರಯೋಜನ ನಮ್ಮ ಓದುಗರಿಗೆ ಸಿಗಲಿ ಎಂಬ ಆಶಯ ಶ್ರೀ ಶಾರದಾ ಬಳಗದ್ದು.

## ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಕುಂಜಾರು ನಿರಂಜನ್ ರಾವ್



ಮೂಲತಃ ಪುತ್ತೂರಿನವರಾದ ಕೆ. ನಿರಂಜನ್ ರಾಯರು ಪ್ರಸ್ತುತ ಅಂಬಲಪಾಡಿಯಲ್ಲಿ ವಾಸ್ತವ್ಯದಲ್ಲಿದ್ದು ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕರಿಸಿದ್ದಾರೆ. ಇದು ಅವರ ಬಹುದಿನಗಳ ಆಶಯವಾಗಿತ್ತು.

ಇವರು ಪುತ್ತೂರು ತಾಲೂಕಿನ ಕುಂಜಾರು ಸೀತಾರಾಮ ರಾವ್ (ಕುಂಜಾರು ಬಾಬು ರಾವ್) ಹಾಗೂ ರಮಾ ದಂಪತಿಗಳ ಪುತ್ರ. ಹುಟ್ಟಿದ್ದು ಅಂಬಲಪಾಡಿಯಲ್ಲಿ. ಇವರ ತಾಯಿ ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷರಾಗಿದ್ದ ಅಂಬಲಪಾಡಿ ಕೃಷ್ಣರಾಯರ ಸಹೋದರಿ. ಬಾಲ್ಯದ ಆರಂಭದ ದಿನಗಳನ್ನು ಕೃಷ್ಣರಾಯರ ಮನೆಯಲ್ಲಿ ಅವರ ಆಸರೆಯಲ್ಲಿಯೇ ಕಳೆದ ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಂಬಲಪಾಡಿಯಲ್ಲಿ ನಡೆಸಿ ಬಳಿಕ ಪುತ್ತೂರಿನಲ್ಲಿ ಎಸ್‌ಎಸ್‌ಎಲ್‌ಸಿ ವರೆಗೆ ಕಲಿತು ಮರಳಿ ಉಡುಪಿಗೆ ಬಂದು ಸಿಂಡಿಕೇಟ್ ಬ್ಯಾಂಕಿನಲ್ಲಿ ಉದ್ಯೋಗ ಮಾಡುತ್ತಾ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನಲ್ಲಿ ಬಿ.ಎ ವ್ಯಾಸಂಗ ನಡೆಸಿದರು. ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಉದ್ಯೋಗ ಆರಂಭಿಸಿ ನಂತರ ಮಲ್ಪೆ, ಮಣಿಪಾಲ, ಧಾರವಾಡ ತಾಲೂಕಿನ ಕುಂದಗೋಳ, ಶಿರ್ವ ಶಾಖೆಗಳಲ್ಲಿ ಕಾರ್ಯನಿರ್ವಹಿಸಿ ಕೊನೆಗೆ ಮಣಿಪಾಲದ ಕೇಂದ್ರ ಕಛೇರಿಯಲ್ಲಿ ಕೆಲಸ ಮಾಡಿ ನಿವೃತ್ತರಾದರು.

ಇವರಿಗೆ ಮೂವರು ತಂಗಿಯರಿದ್ದು ಓರ್ವ ತಮ್ಮ ಸತ್ಯನಾರಾಯಣ ರಾವ್ ಪುತ್ತೂರು ಕುಂಜಾರಿನ ಹಿರಿಯರ ಮನೆಯಲ್ಲಿ ಕೃಷಿ ಮಾಡಿಕೊಂಡಿದ್ದಾರೆ. ಓರ್ವ ಸೋದರಿ ಜಯಂತಿ ಶ್ರೀಧರ ರಾವ್ ಮೈಸೂರಿನಲ್ಲಿ ವಾಸವಾಗಿದ್ದು ಕೊನೆಯ ಸಹೋದರಿಯಾದ ಸಾವಿತ್ರಿಯು ಸಹೋದರನಾದ ಸತ್ಯನಾರಾಯಣರಾಯರ ಜೊತೆ ಪುತ್ತೂರಿನಲ್ಲಿ ವಾಸವಾಗಿದ್ದಾರೆ.

1983ರಲ್ಲಿ ನಂದಾವರದ ದಿ। ರಾಘವಯ್ಯನವರ ಪುತ್ರಿ ಶಾಲಿನಿಯವರನ್ನು ವಿವಾಹವಾದರು ಅದು ವಿನಿಮಯ ವಿವಾಹವಾದ್ದರಿಂದ ರಾಘವಯ್ಯನವರ ಪುತ್ರ ಶಿವಶಂಕರ ರಾಯರೊಂದಿಗೆ ಇವರ ಸೋದರಿ ಲಲಿತರವರ ವಿವಾಹವೂ ಆಯಿತು.

ನಿರಂಜನ ರಾಯರ ಪುತ್ರ ಚೇತನ್ ರಾವ್ ನಿಟ್ಟೆಯಲ್ಲಿ ಬಿ.ಇ ಪದವಿ ಪಡೆದು 2008ರಿಂದ ಫ್ರಾನ್ಸ್ ಮೂಲದ ಕಂಪೆನಿಯಲ್ಲಿ ಉದ್ಯೋಗದಲ್ಲಿದ್ದರು. ವರ್ಷ 2014ರಿಂದ ಟೆಕ್ ಮಹೇಂದ್ರ ಕಂಪೆನಿಯಲ್ಲಿ ಉದ್ಯೋಗದಲ್ಲಿದ್ದಾರೆ. ಮಗ ಚೇತನ್ ರಾವ್ ವಿವಾಹ ನಿರಂಜನ ರಾಯರ ತಂಗಿ ಲಲಿತ ಶಿವಶಂಕರ ರಾಯರ ಮಗಳು ಸಹನಾಳೊಂದಿಗೆ 2012ರಲ್ಲಿ ನಡೆಯಿತು. ಸೊಸೆ ಸಹನಾರವರು ಎಮ್.ಸಿ.ಎ ಪದವೀದರೆಯಾಗಿದ್ದು ಬೆಂಗಳೂರಿನಲ್ಲಿ ಇಂದಿರಾನಗರ ಶಾಲೆಯಲ್ಲಿ ಕಂಪ್ಯೂಟರ್ ಶಿಕ್ಷಕಿಯಾಗಿದ್ದಾರೆ.

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆರಂಭದ ದಿನಗಳಲ್ಲಿ ಸಂಘದ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದ ನಿರಂಜನ್ ರಾಯರು ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಸದಸ್ಯರು ಆಗಿದ್ದಾರೆ. ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾದ ಅವರಿಗೆ ಹಾಗೂ ಅವರ ಕುಟುಂಬಕ್ಕೆ ನಮ್ಮ ಆತ್ಮೀಯ ಅಭಿನಂದನೆಗಳು.

## ಡಾ। ಪಿ.ವಿಕ್ರಮ್ ಕುಮಾರ್‌ರವರಿಗೆ ಡಾಕ್ಟರೇಟ್ ಪದವಿ



ಪರಾರಿ ಪಿ. ವಿದ್ಯಾಪತಿ ರಾವ್ ಮತ್ತು ಶ್ರೀಮತಿ ಕಲಾವತಿ ಇವರ ಎರಡನೆ ಪುತ್ರನಾದ ಶ್ರೀಯುತರು ಗುಜರಾತ್ ಆಯುರ್ವೇದಿಕ್ ಮೆಡಿಕಲ್ ಯುನಿವರ್ಸಿಟಿ, ಜಾಮುನಗರ ಇವರಿಂದ ಪಿ.ಎಚ್.ಡಿ ಪದವಿಯನ್ನು ಇದೇ ಡಿಸೆಂಬರ್ 2014ರಲ್ಲಿ ಪಡೆದಿರುತ್ತಾರೆ. ಇವರು ಡಾ। ಅನಂತ್ ಬಿ.ಟಾಕೂರ್ ಮತ್ತು ಡಾ। ಬಿ. ರವಿಶಂಕರ್ ಇವರ ಮಾರ್ಗದರ್ಶನದಲ್ಲಿ ಈ ಪದವಿಯನ್ನು ಪಡೆದಿರುತ್ತಾರೆ.

ಇವರು ಕೇರಳದ ತಿರುವಂತನಪುರ ಸರಕಾರಿ ಆಯುರ್‌ವೇದಿಕ್ ಕಾಲೇಜಿನಲ್ಲಿ ಎಮ್.ಡಿ ಪದವಿಯನ್ನು ಪಡೆದಿರುತ್ತಾರೆ. ಎಮ್.ಡಿ ಪದವಿ ಮತ್ತು ಪಿ.ಎಚ್.ಡಿ ಪದವಿಯನ್ನು ಕೇಂದ್ರ ಸರಕಾರದ ಮೆರಿಟ್ ಸೀಟಿನಿಂದ ಪಡೆದಿರುತ್ತಾರೆ. ಡಾ। ವಿಕ್ರಮ್ ಕುಮಾರ್‌ರವರು ಈಗ ಮೂಡುಬಿದಿರೆಯ ಆಳ್ವಾಸ್ ಆಯುರ್‌ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ಪ್ರೊಫೆಸರ್‌ರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ರಜತ್ ಕುಮಾರ್ ಕೆ.ಆರ್.ಕೆ.



2014-15ನೇ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಚಿ। ರಜತ್ ಕುಮಾರ್ ಕೆ.ಆರ್.ಕೆ. ಇವನು 570 ಅಂಕ ಪಡೆದು (95%) ತೇರ್ಗಡೆ ಹೊಂದಿರುತ್ತಾನೆ. ಸಿಇಟಿ ಪರೀಕ್ಷೆಯಲ್ಲಿ ಮೆಡಿಕಲ್ ವಿಭಾಗದಲ್ಲಿ 946ನೇ ರ್‍ಯಾಂಕ್ ಗಳಿಸಿ ಪ್ರಸ್ತುತ ಮಂಗಳೂರಿನ ಎ.ಜೆ. ಮೆಡಿಕಲ್ ಕಾಲೇಜಿನಲ್ಲಿ ದಾಖಲಾತಿ ಹೊಂದಿರುತ್ತಾನೆ. ಇವನು ಪ್ರಖ್ಯಾತ ಮೃದಂಗ ವಿದ್ವಾನ್ ಕರ್ನಾಟಕ ಕಲಾಶ್ರೀ ದಿ। ಕುಂಜೂರು ಪರೀಕ್ಷಿತ್‌ಚಂದ್ರನ್ ಮತ್ತು ಶ್ರೀಮತಿ ಸರಸ್ವತಿಯವರ ಮೊಮ್ಮಗ. ಹಾಗೂ ಆಕಾಶವಾಣಿ ಕಲಾವಿದ ಮೃದಂಗ ವಿದ್ವಾನ್ ಕೆ.ಹೆಚ್. ರವಿಕುಮಾರ್ ಮತ್ತು ಜ್ಯೋತಿ ಇವರ ಪುತ್ರ.

## ಶ್ರೀ ಅನಿಲ್ ರಾವ್ ಬಿ.ಎಸ್. ಆಯ್ಕೆ



ಶ್ರೀ ಸುಬ್ರಹ್ಮಣ್ಯ ಸಭಾದ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ.ಎಸ್‌ರವರು ರೋಟರಿ ಕ್ಲಬ್ ಮಂಗಳೂರು ಹಿಲ್‌ಸೈಡ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜ್ಞಾನಶಕ್ತಿ ಪತ್ರಿಕೆಯ ಆರ್ಥಿಕ ಸಲಹಾಗಾರರು ಆಗಿರುವ ಅವರಿಗೆ "ಜ್ಞಾನಶಕ್ತಿ ಹಾಗೂ ಶ್ರೀಶಾರದಾ" ಬಳಗದ ಶುಭ ಹಾರೈಕೆಗಳು.

## ಶ್ರೀ ಲಕ್ಷ್ಮೀಕಾಂತ್‌ರವರಿಗೆ ರಿಜಿಸ್ಟ್ರಾರ್ ಆಗಿ ಭಡ್ತಿ

ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗದಲ್ಲಿ ಸೂಪರಿಂಟೆಂಡೆಂಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಲಕ್ಷ್ಮೀಕಾಂತ ರಾವ್ (ಕೀರ್ತಿಶೇಷ ರುದ್ರಯ್ಯ ಮತ್ತು ಶ್ರೀಮತಿ ಅನಸೂಯ ದಂಪತಿಗಳ ಪುತ್ರ)ರವರು ರಿಜಿಸ್ಟ್ರಾರ್ ಆಗಿ ಭಡ್ತಿ ಹೊಂದಿ ಪ್ರಸ್ತುತ ಮಂಗಳೂರಿನ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಇಂಜಿನಿಯರ್‌ರವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉಡುಪಿ ಅಜ್ಜರಕಾಡಿನ ಲೋಕೋಪಯೋಗಿಯ ಇಲಾಖೆಯ ವಸತಿಗೃಹದಲ್ಲಿ ವಾಸ್ತವ್ಯದಲ್ಲಿ ಇದ್ದ ಇವರು ಈ ಕೆಳಗಿನ ಉಡುಪಿ ಕುಕ್ಕಿಕಟ್ಟೆಯ ಸ್ವಗೃಹಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಸಿದ್ದಾರೆ.

ಶ್ರೀ ಲಕ್ಷ್ಮೀಕಾಂತ ರಾವ್, ನಂ.5-42(4)(1), "ಮಾತೃಕೃಪಾ", ಕಲ್ಯಾಣನಗರ, 4ನೇ ಅಡ್ಡರಸ್ತೆ, ಕುಕ್ಕಿಕಟ್ಟೆ, ಉಡುಪಿ-576 101. ಮೊಬೈಲ್ : 9449402419

## ಋಗುಪಾಕರ್ಮ ಆಚರಣೆ

ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ ಹೊಸ್ಕೋಟೆ ಇದರ ವತಿಯಿಂದ ಮನ್ಮಥನಾಮ ಸಂವತ್ಸರದಲ್ಲಿ ತಾ.28-08-2015ನೇ ಶುಕ್ರವಾರ ಋಗುಪಾಕರ್ಮ ಆಚರಿಸಲಾಯಿತು. ಹೆಬ್ರಿ-ಕೆರೆಬೆಟ್ಟು ನೋಧಾಗೌತಮ ವೇದಿಕೆಯ ಪುರೋಹಿತರಾದ ಕೆ. ಲಕ್ಷ್ಮೀನಾರಾಯಣ ಹೆಬ್ಬಾರರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಹೊಸ್ಕೋಟೆ ಶ್ರೀ ಮಾಧವರಾಯರ "ಜನನೀ"ಮನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಾಜದ ಹಿರಿಯ ಗೃಹಸ್ಥರು, ಬ್ರಹ್ಮಚಾರಿಗಳು ಹಾಗೂ ನೂತನ ಬ್ರಹ್ಮಚಾರಿಗಳು ಉಪಸ್ಥಿತರಿದ್ದು ಸಂಪನ್ನಗೊಳಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಋಗುಪಾಕರ್ಮ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.28-08-2015ರಂದು ಋಗುಪಾಕರ್ಮ ನೆರವೇರಿತು. ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರು ಹೋಮ ಹವನಗಳನ್ನು ನೆರವೇರಿಸಿದರು. ಶ್ರೀ ಸಭಾದ ಪದಾಧಿಕಾರಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆ, ಡಾ. ಎ. ಪಿ ಕೃಷ್ಣ, ಶ್ರೀ ಅನಿಲ್ ರಾವ್ ಬಿ. ಎಸ್, ಶ್ರೀ ಪಿ ಶ್ರೀಕಾಂತ್ ರಾವ್ ಸಹಿತ ನೂರಾರು ಸಮಾಜ ಬಾಂದವರು ಭಾಗವಹಿಸಿದ್ದರು.

ಚಿತ್ರ : ಶ್ರೀ ರಘುವೀರ ಪೆರ್ಡೂರು        ವರದಿ : ಶ್ರೀ ಪಿ ಶ್ರೀಕಾಂತ್ ರಾವ್

## ಯುವವೇದಿಕೆಯಿಂದ ಶ್ರೀ ಶಾರದಾ ದೇವಸ್ಥಾನದ ಸ್ವಚ್ಛತಾ ಕಾರ್ಯಕ್ರಮ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು (ರಿ) ಉಡುಪಿಯ ಯುವವೇದಿಕೆಯ ಕಾರ್ಯಕರ್ತರು ಆಟಿ ತಿಂಗಳ ಕೊನೆಯ ದಿನವಾದ ತಾ.16-08-2015ರ ಆದಿತ್ಯವಾರದಂದು ಶ್ರೀ ಶಾರದಾ ದೇವಸ್ಥಾನವನ್ನು ತಿಕ್ಕಿ ತೊಳೆದು ಸ್ವಚ್ಛಗೊಳಿಸಿ ಶ್ರೀದೇವಿಗೆ ಕರಸೇವೆಗೈದರು.

ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಘದ ಉಪಾಧ್ಯಕ್ಷರಾದ ಡಾ| ವೈ. ಸುದರ್ಶನರಾವ್, ಶ್ರೀ ಎಸ್. ಎಂ. ರಾವ್, ಸಲಹೆಗಾರರಾದ ಶ್ರೀ ಸಿ.ಎಸ್.ರಾವ್, ಶ್ರೀ ಬಿ.ವಾಸುದೇವರಾವ್, ಕಾರ್ಯದರ್ಶಿ ಕೊಕ್ರಾಡಿ ಸುರೇಶ ರಾವ್, ಕೋಶಾಧಿಕಾರಿ ಕೆ. ಸುಧಾಕರ ರಾವ್‌ರವರು ಉಪಸ್ಥಿತರಿದ್ದರು. ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಕೃಷ್ಣರಾಜ ರಾವ್ ಉಂಡಾರು, ದೇವಸ್ಥಾನ ವೇದಿಕೆಯ ಅಧ್ಯಕ್ಷ ಶ್ರೀ ವಿಠಲರಾವ್, ಕಾರ್ಯಕರ್ತರಾದ ಶ್ರೀ ಕರಂದಾಡಿ ವಾಸುದೇವರಾವ್, ಶ್ರೀ ವಿನೀಶ, ಶ್ರೀ ಅಜಿತ್, ಶ್ರೀ ಪ್ರಸಾದ್ ರಾವ್, ಶ್ರೀ ಎ.ವಿ.ರಾವ್, ಶ್ರೀ ಪ್ರಕಾಶ್ ಕುಮಾರ್, ಕುಮಾರಿ ದೀಕ್ಷಾ, ಕುಮಾರಿ ಮಾನಸ ಹೀಗೆ ಸುಮಾರು ಅರವತ್ತಕ್ಕೂ ಹೆಚ್ಚು ಜನರು ದೇವಸ್ಥಾನದ ಗರ್ಭಗುಡಿಯ ಮೇಲ್ಛಾವಣಿ, ಸುತ್ತುಪೌಳಿ ಹಾಗೂ ದೇವಸ್ಥಾನ ಪರಿಕರಗಳಿಗೆ ಹಿಡಿದಿದ್ದ ಧೂಳು, ಹೊಗೆ ಕಲೆಗಳನ್ನು ತಿಕ್ಕಿತೊಳೆದು ಸ್ವಚ್ಛಗೊಳಿಸಿದರು. ಯುವವೇದಿಕೆಯ ಸಂಚಾಲಕರಾದ ಶ್ರೀ ವಸಂತರಾವ್ ಕರಂಬಳ್ಳಿ ಇವರ ಮುತುವರ್ಜಿಯಿಂದ ಈ ಕಾರ್ಯಕ್ರಮ ನಡೆದು ಎಲ್ಲರಿಗೂ ಧನ್ಯತಾ ಭಾವನೆ ಮೂಡಿತು.

## ಶ್ರೀ ಶಾರದಾಮಂಟಪದಲ್ಲಿ ನಾಗರಪಂಚಮಿ ಆಚರಣೆ



ನಾಗರ ಪಂಚಮಿ ಯುಗಾದಿಯ ನಂತರ ಬರುವ ಮೊದಲನೆಯ ಹಬ್ಬ, ಆಷಾಢಮಾಸದಲ್ಲಿ ಜಡಿಮಳೆಯೊಂದಿಗೆ ಯಾವುದೇ ಸಮಾರಂಭಗಳಿಲ್ಲದೆ ಸಪ್ಪಗಿರುವ ಶ್ರೀ ಶಾರದಾ ಮಂಟಪದಲ್ಲಿ ನಾಗರಪಂಚಮಿಯೊಂದಿಗೆ ಚಟುವಟಿಕೆ ಆರಂಭವಾಗುತ್ತದೆ.

ಶ್ರೀ ಶಾರದಾ ದೇವಸ್ಥಾನದ ಆವರಣದಲ್ಲಿರುವ ನಾಗದೇವರ ಗುಡಿಯಲ್ಲಿ ಪ್ರತೀ ತಿಂಗಳ ಪಂಚಮಿಯಂದು ನಾಗದೇವರಿಗೆ ತನುಸೇವೆ ನಡೆಯುತ್ತದೆ. ತಾ.19-08-2015ರ ಬುಧವಾರದಂದು ನಾಗರ ಪಂಚಮಿಯ ದಿವಸ ನವೀಕರಿಸಿದ ನಾಗದೇವರ ಗುಡಿಯಲ್ಲಿ ನೂರಾರು ಭಕ್ತರು, ಸಮಾಜಬಾಂಧವರು ನಾಗದೇವರಿಗೆ ತನು, ಪೂಜೆ ಸಮರ್ಪಿಸಿದರು. ದೇವಸ್ಥಾನವೇದಿಕೆಯ ಅಧ್ಯಕ್ಷ ಶ್ರೀ ಜಿ.ಕೆ ಕೋಲ್ಪೆ, ಸಂಘದ ಅಧ್ಯಕ್ಷ ಶ್ರೀ ವೈ. ಭುವನೇಂದ್ರರಾವ್, ಶ್ರೀ ಮೋಹನ್ ದೇವ್, ಮಹಿಳಾ ವೇದಿಕೆಯ ಶ್ರೀಮತಿ ಉಷಾ ಮೋಹನ್‌ದೇವ್‌ರಾದಿಯಾಗಿ ಅನೇಕ ಸಮಾಜಬಾಂಧವರು ಆಗಮಿಸಿ ಸೇವೆಗೈದು ಸಮಾಜಬಾಂಧವರ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿದರು. ಅಂದು ನಾಗನಗುಡಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಶ್ರೀ ಶಾರದಾ ಮಂಟಪದ ನಾಗದೇವರ ಗುಡಿಯಲ್ಲಿ ಪವಮಾನ ಕಲಶ, ತನು ಸೇವೆ, ಸರ್ಪಸೂಕ್ತಾಭಿಶೇಕ, ಸರ್ಪಸಂಸ್ಕಾರ ಹಾಗೂ ಆಶ್ಲೇಷಬಲಿಯಾದಿಯಾಗಿ ನಾಗದೇವರ ಸಂಪ್ರೀತಾರ್ಥವಾಗಿ ನಡೆಯುವ ಸೇವೆಗಳಿಗೆ ಅನುಕೂಲತೆಗಳಿದ್ದು ಸಮಾಜಬಾಂಧವರು ಇದರ ಉಪಯೋಗ ಪಡೆದುಕೊಳ್ಳಬಹುದು.

## ''ಕಲಾವಿಹಾರಿ'' ಎ. ಈಶ್ವರಯ್ಯ ನವರಿಗೆ ಸಮ್ಮಾನ




ಹಿರಿಯ ಪತ್ರಕರ್ತ, ಕಲಾವಿಮರ್ಶಕ, ನಮ್ಮ ಸಮಾಜದ ಹೆಮ್ಮೆಯ ಹಿರಿಯ ಶ್ರೀ ಅನಂತಪುರ ಈಶ್ವರಯ್ಯರವರ 75ನೇ ಹುಟ್ಟು ಹಬ್ಬದ ಸಂತೋಷವನ್ನು ಅವರೇ ಹುಟ್ಟು ಹಾಕಿ ಬೆಳೆಸಿದ ಉಡುಪಿಯ ರಾಗಧನ ಸಂಸ್ಥೆಯ ಸದಸ್ಯರು ಶ್ರೀ ಈಶ್ವರಯ್ಯ ಹಾಗೂ ಶ್ರೀಮತಿ ಗಿರಿಜಾ ದಂಪತಿಗಳನ್ನು ಶ್ರೀ ಶಾರದಾ ಮಂಟಪದಲ್ಲಿ ತಾ.09-08-2015 ರಂದು ಸಮ್ಮಾನಿಸಿ, ಅಭಿನಂದಿಸಿ ಆಚರಿಸಿದರು.

ಪ್ರೊಫೆಸರ್ ಡಾ| ವರದರಾಜ ಚಂದ್ರಗಿರಿ, ನಾಗಸ್ವರ ವಿದ್ವಾನ್ ನಾಗೇಶ ಬಪ್ಪನಾಡು, ಇತಿಹಾಸ ತಜ್ಞ ಡಾ| ಬಿ.ಸುರೇಂದ್ರ ರಾವ್ ವೇದಿಕೆಯಲ್ಲಿದ್ದರು. 75 ಹಣತೆ ಹಚ್ಚಿ 75 ರ ಸಂಭ್ರಮ ಆಚರಿಸಲಾಯಿತು.

ಸಮ್ಮಾನ ಸ್ವೀಕರಿಸಿ ಮಾತನಾಡಿದ ಈಶ್ವರಯ್ಯನವರು ಸ್ವಪ್ರಯತ್ನವಿದ್ದಾಗ ಆಸಕ್ತಿಯಿರುತ್ತದೆ. ಕಲೆಯನ್ನು ಸಮೃದ್ಧವಾಗಿಸಲು ಎಲ್ಲವನ್ನೂ ಕಲಿಯಬೇಕಾಗುತ್ತದೆ ಎಂದರು. ಶ್ರೀ ಶಾರದಾ ಪತ್ರಿಕೆಗೆ ಶ್ರೀ ಈಶ್ವರಯ್ಯನವರು ನೀಡಿರುವ ಪ್ರೋತ್ಸಾಹವನ್ನು ಶ್ರೀ ಶಾರದಾ ಬಳಗವು ಸ್ಮರಿಸುತ್ತಾ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.
ಇ-ಮೇಯ್ಲ್ : srisharadaudupi@gmail.com ಹಾಗೂ sudarshany@rediffmail.com
ವಾಟ್ಸ್ ಆ್ಯಪ್ ನಂಬ್ರ : 9845136322
ಶಾರದ ಮಂಟಪದ ಮ್ಯಾನೇಜರ್ : 0820-2530754, 9663049590

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

| | | |
|---|---|---|
| ಅಜೀವಸದಸ್ಯರು | : | ರೂ.500/- |
| ದಾನಿಗಳು | : | ರೂ.1000/- |
| ಪೋಷಕರು | : | ರೂ.5000/- |
| ಮಹಾಪೋಷಕರು | : | ರೂ.10000/- |

### ಜಾಹೀರಾತುದರ


| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.300/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1200/- |


ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್‌ಸ್ಟ್ರೀಟ್ ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 01092200002928 at Syndicate Bank Carstreet Branch, Udupi IFSC Code SYNB0000186

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಚಿಣ್ಣರ ಅಂಗಳ


ಕಾರ್ತಿಕ್ ರಾವ್, ಇಂದ್ರಾಳಿ ಇಂಗ್ಲೀಷ್ ಮೀಡಿಯಂ ಸ್ಕೂಲ್


ಸ್ಕಂದ, 3ನೇ ತರಗತಿ, ಅನಂತೇಶ್ವರ ಹಿರಿಯ ಪ್ರಾಥಮಿಕ ಶಾಲೆ


ಉಜ್ವಲ್ ರಾವ್, 6ನೇ ತರಗತಿ, ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್, ಬ್ರಹ್ಮಾವರ

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org